# ಹಂಪಿ ಟೈಮ್ಸ್
# HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY









ಸಂಪುಟ:01 • ಸಂಚಿಕೆ:159 • ನೋಂದಣಿ ನಂ.:KARKAN27911 • ವಿಜಯನಗರ • 17.11.2023 • ಶುಕ್ರವಾರ • ಪುಟ:04 • ಬೆಲೆ:2
Volume:01 • Issue:159 • Reg.No:KARKAN27911 • VIJAYANAGARA • 17.11.2023 • Friday • Page:04 • Rs:2







## ಮೈಕ್ರೋ ನ್ಯೂಸ್

> ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
> ಡಿ..ವಿ.ಜಿ.

## ಹಳಿತಪ್ಪಿದ ಗೂಡ್ಸ್ ರೈಲು ಸಂಚಾರದಲ್ಲಿ ಮಾರ್ಗ ಬದಲಾವಣೆ

**ಹಂಪಿ ಟೈಮ್ಸ್ ಹೊಸಪೇಟೆ**

ತಾಲೂಕಿನ ವ್ಯಾಸನಕೇರಿ ರೈಲು ನಿಲ್ದಾಣ ಸಮೀಪ ಗುರುವಾರ ಸಂಜೆ 4.30ರ ಸುಮಾರಿಗೆ ಗೂಡ್ಸ್ ರೈಲಿನ 10 ಬೋಗಿಗಳು ಹಳಿತಪಿದ್ದು, ವಿವಿಧ ರೈಲುಗಳ ಸಂಚಾರ ರದ್ದುಗೊಳಿಸಲಾಗಿದೆ, ಈ ಘಟನೆಯಿಂದ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ ಎಂದು ರೈಲ್ವೇ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಹಳಿಗಳಿಂದ ರೈಲು ತೆರವು ಕಾರ್ಯದ ನಡೆಯುತ್ತಿರುವುದರಿಂದ ಇಂದು ಈ ಮಾರ್ಗದಲ್ಲಿ ಸಂಚರಿಸಬೇಕಿದ್ದ ಹೊಸಪೇಟೆ–ಹರಿಹರ ಪ್ಯಾಸೆಂಜರ್, ಹರಿಹರ– ಬಳ್ಳಾರಿ ಡೆಮೊ ಸ್ಪೆಷಿಯಲ್, ಬಳ್ಳಾರಿ – ಹೊಸಪೇಟೆ ಡೆಮೋ ಸ್ಪೆಷಿಯಲ್ ರೈಲುಗಳ ಸಂಚಾರವನ್ನು ರದ್ದುಗೊಳಿಸಲಾಗಿದೆ.

ಇನ್ನುಳಿದಂತೆ ವಿಜಯಪುರ– ಯಶವಂತಪುರ ಮತ್ತು ಯಶವಂತಪುರ– ವಿಜಯಪುರ ಎಕ್ಸ್‌ಪ್ರೆಸ್ ರೈಲುಗಳ ಮಾರ್ಗ ಬದಲಾವಣೆ ಮಾಡಲಾಗಿದೆ. ಹೊಸಪೇಟೆ – ಕೊಟ್ಟೂರು ಮಾರ್ಗದ ಬದಲಾಗಿ ಹೊಸಪೇಟೆ, ಬಳ್ಳಾರಿ, ರಾಯದುರ್ಗ, ಚಿಕ್ಕಜಾಜೂರು ಮಾರ್ಗದಲ್ಲಿ ಸಂಚಾರಿಸಲಿವೆ ಎಂದು ಮಾಹಿತಿ ನೀಡಿದ್ದಾರೆ.

## ನ.17 ಹರಪನಹಳ್ಳಿಯಲ್ಲಿ ಬರಗಾಲ, ಪ್ರಗತಿ ಪರಿಶೀಲನಾ ಸಭೆ

**ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲೆಯ ಹರಪ್ಪನಹಳ್ಳಿ ತಾಲ್ಲೂಕು ಬರಗಾಲ, ಕುಡಿಯುವ ನೀರಿನ ಸಮಸ್ಯೆಗಳು ಮತ್ತು ಕಾಮಗಾರಿಗಳ ಕುರಿತು ಪ್ರಗತಿಪರಿಶೀಲನೆ ಸಭೆಯನ್ನು ನ.17ರಂದು ಮಧ್ಯಾಹ್ನ 12 ಗಂ–ಟೆಗೆ ಹರಪ್ಪನಹಳ್ಳಿಯ ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಜಿಲ್ಲಾಧಿಕಾರಿಎಂ.ಎಸ್.ದಿವಾಕರ್ ಅವರು ಸಭೆಯ ಅಧ್ಯಕ್ಷತೆ ವಹಿಸುವರು. ಸಂಬಂಧಪಟ್ಟ ಅಧಿಕಾರಿಗಳು ಅಗತ್ಯ ಮಾಹಿತಿಯೊಂದಿಗೆ ಖುದ್ದಾಗಿ ಸಭೆಗೆ ಹಾಜರಾಗಬೇಕು ಎಂದು ಅಪರ ಜಿಲ್ಲಾಧಿಕಾರಿ ಅನುರಾಧ ಜಿ ತಿಳಿಸಿದ್ದಾರೆ.

# ಮಕ್ಕಳ ಆರೋಗ್ಯಕ್ಕಾಗಿ ಮನೆ ಮನೆಗೆ ಓಆರ್‌ಎಸ್-ಜಿಂಕ್ ವಿತರಣೆ

### ಡಿಎಚ್‌ಒ ಶಂಕರ ನಾಯ್ಕ ಹೇಳಿಕೆ | ತೀವ್ರತರ ಅತೀಸಾರ ಬೇಧಿ ನಿಯಂತ್ರಣ ಪಾಕ್ಷಿಕ ಕಾರ್ಯಕ್ರಮಕ್ಕೆ ಚಾಲನೆ



**ಹಂಪಿ ಟೈಮ್ಸ್ ಹೊಸಪೇಟೆ**

ಅತೀಸಾರ ಬೇಧಿಯಿಂದಾಗಿ 5 ವರ್ಷದೊಳಗಿನ ಅನೇಕ ಮಕ್ಕಳು ಸಾವಿಗೀಡಾಗುತ್ತಿದ್ದು, ಮಕ್ಕಳ ಸಾವಿನ ಪ್ರಮಾಣ ತಗ್ಗಿಸಲು ಅತೀಸಾರ ಬೇಧಿ ನಿಯಂತ್ರಣಕ್ಕೆ ಕ್ರಮವಹಿಸುವುದು ನಮ್ಮ ಜವಾಬ್ದಾರಿಯಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತುಕುಟುಂಬ ಕಲ್ಯಾಣಾಧಿಕಾರಿ ಡಾ. ಎಲ್. ಆರ್.ಶಂಕರನಾಯ್ಕ ಹೇಳಿದರು.

ನಗರದ ತಾಯಿ ಮಕ್ಕಳ ಆಸ್ಪತ್ರೆಯಲ್ಲಿ ಗುರುವಾರ ಹಮ್ಮಿಕೊಂಡಿದ್ದ ತೀವ್ರತರ ಅತೀಸಾರ ಭೇದಿ ನಿಯಂತ್ರಣ ಪಾಕ್ಷಿಕದ ಜಿಲ್ಲಾ ಮಟ್ಟದ ಕಾರ್ಯಕ್ರಮಕ್ಕೆ ಉದ್ಘಾಟಿಸಿ ಮಾತನಾಡಿದರು. ಜಿಲ್ಲೆಯಲ್ಲಿ ನ.15ರಿಂದ 28ರ ವರೆಗೆ ನಡೆಯಲಿರುವ ತೀವ್ರತರ ಅತೀಸಾರ ಬೇಧಿ ನಿಯಂತ್ರಣ ಪಾಕ್ಷಿಕ (ಐಡಿಸಿಎಫ್) ಕಾರ್ಯಕ್ರಮಕ್ಕೆ ನಡೆಯಲಿದೆ. ಈ ಅವಧಿಯಲ್ಲಿ ಆಶಾ ಕಾರ್ಯಕತೆ–ಯರು ಮನೆ ಮನೆಗೆ ತೆರಳಿ ಮಕ್ಕಳಿಗೆ ಓ.ಆರ್.ಎಸ್ ಮತ್ತು ಜಿಂಕ್ ವಿತರಿಸಲಿದ್ದಾರೆ. ಸಾರ್ವಜನಿಕರಿಗೆ ಓ.ಆರ್.ಎಸ್ ಮತ್ತು ಜಿಂಕ್ ಉಪಯೋಗದ ತಿಳುವಳಿಕೆ ನೀಡಲಾಗುತ್ತಿದೆ. ಇದರ ಜೊತೆಗೆ ಶುದ್ಧ ಕುಡಿಯುವ ನೀರಿನ ಬಳಕೆ, ಶೌಚಾಲಯಗಳ ಬಳಕೆ, ಕೈತೊಳೆಯುವ ವಿಧಾನಗಳ ಬಗ್ಗೆ ಜನಸಮುದಾಯಕ್ಕೆ ಮನವರಿಕೆ ಮಾಡಿಕೊಡಲಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿ ಡಾ.ಜಂಬಯ್ಯ ಬಿ., ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ.ಜಗದೀಶ ಪಾಟ್ನೆ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಎಂ.ಪಿ.ದೊಡ್ಡಮನಿ, ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ಶಸ್ತ್ರಚಿಕಿತ್ಸಕ ಡಾ.ಸಲೀಂ, ತಾಲ್ಲೂಕು ಆರೋಗ್ಯ ಅಧಿಕಾರಿ ಡಾ.ಭಾಸ್ಕರ್ ಡಿ., ವೈದ್ಯಾಧಿಕಾರಿಗಳಾದ ಡಾ.ಉಷಾ, ಡಾ.ಚಂದ್ರಮೋಹನ್, ಡಾ.ನೂರ್ ಭಾಷಾ ಸೇರಿದಂತೆ ಇತರರಿದ್ದರು.

# ದೇವರಿಗೆ ಖಾಲಿಜಾಗ ಕೊಡಿ

### ಗ್ರಂಥಾಲಯ ನಿರ್ಮಾಣದ ಜಾಗವನ್ನು ಆಂಜಿನೇಯ ದೇವಸ್ಥಾನಕ್ಕೆ ಮೀಸಲಿಡುವಂತೆ ಗ್ರಾಮಸ್ಥರ ಆಗ್ರಹ

**ಹಂಪಿ ಟೈಮ್ಸ್ ಹೊಸಪೇಟೆ**

ತಾಲೂಕಿನ ನಾಗೇನಹಳ್ಳಿ ಗ್ರಾಮಪಂಚಾಯಿತಿ ಕೇಂದ್ರಸ್ಥಾನದಲ್ಲಿರುವ ಶ್ರೀ ಆಂಜನೇಯ ದೇವಸ್ಥಾನಕ್ಕೆ ಸಮಸ್ತ ಸಮುದಾಯದಗಳಿಂದ ಬರುವ ಭಕ್ತರ ಸಂಖ್ಯೆ ಹೆಚ್ಚುತ್ತಲಿದೆ. ದೇವಸ್ಥಾನದ ಧಾರ್ಮಿಕ ಕಾರ್ಯಕ್ರಮಗಳಿಗಾಗಿ ದೇವಸ್ಥಾನ ಪಕ್ಕದಲ್ಲಿರುವ ಖಾಲಿ ಜಾಗವನ್ನು ದೇವಸ್ಥಾನಕ್ಕೆ ಮೀಸಲಿಟ್ಟು, ನೂತನ ಗ್ರಂಥಾಲಯ ಕಟ್ಟಡವನ್ನು ಬೇರೆಡೆ ನಿರ್ಮಿಸಬೇಕೆಂದು ಆಗ್ರಹಿಸಿ ನಾಗೇನಹಳ್ಳಿ ಗ್ರಾಮ ಪಂಚಾಯಿತಿ ಎದುರು ಸರ್ವ ಸಮುದಾಯಗಳ ಒಕ್ಕೂಟದಿಂದ ಗುರುವಾರ ಹೋರಾಟ ನಡೆಸಿ ಮನವಿ ಸಲ್ಲಿಸಲಾಯಿತು.

ಒಕ್ಕೂಟ ಮುಖಂಡ ಡಿ.ಶ್ರೀನಿವಾಸ್ ಮಾತನಾಡಿ, ದಶಕಗಳಿಂದಲೂ ದೇವಸ್ಥಾನದ ಧಾರ್ಮಿಕ ಕಾರ್ಯಚಟುವಟಿಕೆಗಳಿಗಾಗಿಯೇ ಜಾಗವನ್ನು ಮೀಸಲಿಡಲಾಗಿದೆ. ಧಾರ್ಮಿಕ ಚಿಂತನ–ಮಂಥನ, ತೇರು,




ಭಜನಾ ಕಾರ್ಯಕ್ರಮ ಸೇರಿದಂತೆ ಇನ್ನಿತರ ಧಾರ್ಮಿಕ ಕಾರ್ಯಕ್ರಮಗಳಿಗೆ ಜಾಗ ಎಷ್ಟಿದ್ದರೂ ಸಾಲದು. ಭಕ್ತರು ದೇವಾಲಯಕ್ಕೆ ಬರುವುದು ತುಸು >>3

# ಜೀವಸಂಕುಲಕ್ಕೆ ವರದಾನ ತುಂಗಭದ್ರಾ ಜಲಾಶಯ

### ಕರ್ನಾಟಕ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ರಾಜೇಶ್ ಅಮ್ಮಿನಬಾವಿ ಅಭಿಮತ



**ಹಂಪಿ ಟೈಮ್ಸ್ ಹೊಸಪೇಟೆ**

ನಿಸರ್ಗವನ್ನು ಅರ್ಥಮಾಡಿಕೊಂಡು ಶತಮಾನಗಳ ಹಿಂದೆ ತುಂಗಭದ್ರಾ ನದಿಗೆ ಅಣೆಕಟ್ಟುಗಳನ್ನು ಹಾಕಿ ಕಾಲುವೆಗಳನ್ನು ನಿರ್ಮಿಸಲಾಗಿದೆ, ಇವುಗಳ ಆಧುನೀಕರಣ ಮಾಡುವ ಅವಕಾಶ ನಮಗೆ ದೊರಕಿರುವುದು ದೊಡ್ಡ ಜವಾಬ್ದಾರಿ, ಇಲ್ಲಿರುವ ನೀರು ನಾಯಿ, ಮೊಸಳೆ ಇತ್ಯಾದಿ ಈ ಭಾಗದಲ್ಲಿರುವ ಎಲ್ಲಾ ಜೀವವೈವಿಧ್ಯವನ್ನು ಮತ್ತು ವಿಶ್ವವಿಖ್ಯಾತ ಹಂಪಿ ಸ್ಮಾರಕಗಳನ್ನು ಕಾಪಾಡಿಕೊಂಡು ಕಾಮಗಾರಿ ನಿರ್ವಹಿಸುತ್ತಿರುವುದು ಮೆಚ್ಚುವಂತಹುದು" ಎಂದು ಕರ್ನಾಟಕ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ರಾಜೇಶ್ ಅಮ್ಮಿನಬಾವಿ ಅಭಿಪ್ರಾಯಪಟ್ಟರು.

> **ಏಶ್ಯನ್ ಡೆವಲಪ್ಮೆಂಟ್ ಬ್ಯಾಂಕ್ ಅನುದಾನದಲ್ಲಿ ನಡೆಯುತ್ತಿರುವ ವಿಜಯನಗರ ಕಾಲುವೆಗಳ ಆಧುನೀಕರಣ ಕಾಮಗಾರಿಗಳ ಪ್ರಗತಿಯ ಪರಿಶೀಲನೆ ವಿಜಯನಗರ ಕಾಲುವೆಗಳಾದ ಬಸವಣ್ಣ, ರಾಯ ಕಾಲುವೆ, ತುರ್ತಾ ಅಣೆಕಟ್ಟು, ಕಾಳಘಟ್ಟ ಮಡಿ ಗಾಲುವೆ ವೀಕ್ಷಿಸಿ, ಸಲಹೆ ನೀಡಿದರು.**

ನಿಗಮಕ್ಕೆ ನೂತನವಾಗಿ ನೇಮಕಗೊಂಡ ನಂತರ ಇದೇಮೊದಲ ಬಾರಿಗೆ ಅವರು ನ.13 ಸೋಮವಾರ ಯೋಜನಾ ಪ್ರದೇಶಕ್ಕೆ ಭೇಟಿನೀಡಿ ಹಂಪಿಸುತ್ತ–ಮುತ್ತ ಹರಡಿರುವ ವಿಜಯನಗರ ಕಾಲುವೆಗಳು ಮತ್ತು ಅಣೆಕಟ್ಟುಗಳ ಪರಿಶೀಲನೆ ನಡೆಸಿದರು. ಏಶ್ಯನ್ ಡೆವಲಪ್ಮೆಂಟ್ ಬ್ಯಾಂಕ್ ಅನುದಾನದಲ್ಲಿ ನಡೆಯುತ್ತಿರುವ ವಿಜಯನಗರ ಕಾಲುವೆಗಳ ಆಧುನೀಕರಣ ಕಾಮಗಾರಿಗಳ ಪ್ರಗತಿಯ ಬಗ್ಗೆ ಯೋಜನೆಯ ನೋಡಲ್ ಅಧಿಕಾರಿ ಹಾಗೂ ತುಂಗಭದ್ರಾ ಜಲಾಶಯ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಕೆ.ಬಿ.ಹೆಚ್. ಶಿವಶಂಕರ್ ವಿವರಿಸಿದರು.

ಹೊಸಪೇಟೆ ನಗರದಲ್ಲಿ ಹಾದು ಹೋಗಿರುವ ಬಸವಣ್ಣ ಹಾಗೂ ರಾಯ ಕಾಲುವೆಗಳಲ್ಲಿ ಇನ್ನೂ ಕೈಗೊಳ್ಳಬೇಕಾದ ಕೆಲಸಗಳನ್ನು ವೀಕ್ಷಿಸಿದರು. ನಂತರ ಕಾಮಗಾರಿ ಚಾಲನೆಯಲ್ಲಿರುವ ಹೊಸೂರು ಅಣೆಕಟ್ಟು, ತುರ್ತಾಅಣೆಕಟ್ಟು, ಕಂಪ್ಲಿ ಅಣೆಕಟ್ಟು, ಕಾಳಘಟ್ಟ ಕಾಲುವೆಯ ಮಡಿಗಾಲುವೆಗಳು ಮತ್ತು ಮುಖ್ಯ ಕಾಲುವೆಗಳಿಗೆ ಭೇಟಿನೀಡಿ ಅಗತ್ಯ ಸಲಹೆ–ಸೂಚನೆಗಳನ್ನು ನೀಡಿದರು. ಮದ್ಯಾಹ್ನದ ಗಂಗಾವತಿ ಮೇಲಣ ಮತ್ತು ಕೆಳಗಣಕಾಲುವೆ ಮತ್ತು ಅಣೆಕಟ್ಟುಗಳು ಹಾಗೂ ಆನೆಗುಂದಿ ಕಾಲುವೆ ಕಾಮಗಾರಿಗಳನ್ನು ವೀಕ್ಷಿಸಿದರು.

ಈ ಸಂದರ್ಭದಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಬಸಪ್ಪಜಾನಕರ್, ಅಮರೇಶಪ್ಪ, ಇಜಿಐಎಸ್ ಯೋಜನಾಸಹಾಯಕ ಸಮಾಲೋಚಕ ತಂಡದ ಟೀಮ್ ಲೀಡರ್ ಆರ್.ದೊರೈಸ್ವಾಮಿ, ತಜ್ಞರಾದ ರಮೇಶ್, ಮಲ್ಲಿಕಾರ್ಜುನ, ಆರ್.ಎನ್.ಎಸ್ ಗುತ್ತಿಗೆದಾರ ಕಂಪನಿಯ ಕೆ.ಟಿ.ಶೆಟ್ಟಿ, ಶ್ರೀಜಿಗುತ್ತಿಗೆದಾರ ಕಂಪನಿಯ ರಾಜೇಶ್ ಹಾಗೂ ಇತರ ಸಿಬ್ಬಂದಿಗಳು ಹಾಜರಿದ್ದರು.




## ನ್ಯೂಮೋನಿಯಾ ಕುರಿತಂತೆ ಪೋಷಕರಲ್ಲಿ ಜಾಗೃತಿ ಮೂಡಿಸಿ: ಡಾ.ಲಿಂಗರಾಜು ಟಿ.

ಹಂಪಿ ಟೈಮ್ಸ್ ಕೊಪ್ಪಳ
ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕೊಪ್ಪಳ ಇವರ ಸಂಯುಕ್ತಾಶ್ರಯದಲ್ಲಿ ಜಿಲ್ಲೆಯ ಸಮುದಾಯ ಆರೋಗ್ಯ ಕೇಂದ್ರ/ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ನಗರ ಆರೋಗ್ಯ ಕೇಂದ್ರ ಮಟ್ಟದಲ್ಲಿ ನ್ಯೂಮೋನಿಯಾವನ್ನು ಯಶಸ್ವಿಯಾಗಿ ನಿವಾರಣೆ ಮಾಡಲು ಸಾಮಾಜಿಕ ಜಾಗರೂಕತೆ ಮತ್ತು ಕ್ರಿಯಾತ್ಮಕ ಚಟುವಟಿಕೆಗಳು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಉದ್ದೇಶಿಸಿ ವಿಡಿಯೋ ಸಂವಾದದ ಮೂಲಕ ಮಾತನಾಡಿದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಲಿಂಗರಾಜು ಟಿ. ಅವರು, ಮಕ್ಕಳಿಗೆ ಬರುವ 12 ಮಾರಕ ರೋಗಗಳ ವಿರುದ್ಧ ಈಗಾಗಲೇ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಮತ್ತು ಅಂಗನವಾಡಿ ಕೇಂದ್ರಗಳಲ್ಲಿ ಗರ್ಭಿಣಿ ಮತ್ತು ಶಿಶುಗಳಿಗೆ ಲಸಿಕೆ ನೀಡಲಾಗುತ್ತಿದೆ. ಮಕ್ಕಳನ್ನು ಕಾಡುವ ಸಾಮಾನ್ಯ ಖಾಯಿಲೆಗಳಲ್ಲಿ ನ್ಯುಮೋನಿಯಾ ಖಾಯಿಲೆ ಕೂಡ ಒಂದಾಗಿದೆ. ತೀವ್ರ ರೀತಿಯ ನ್ಯುಮೋನಿಯಾದಿಂದ ಮಕ್ಕಳ ಮರಣ ತಪ್ಪಿಸುವ ಸಲುವಾಗಿ ಪ್ರತಿ ವರ್ಷ ನವೆಂಬರ್ 12 ರಂದು ವಿಶ್ವ ನ್ಯುಮೋನಿಯಾ ದಿನಾಚರಣೆಯನ್ನು ಆಚರಿಸಲಾಗುತ್ತದೆ. ಇದರ ಉದ್ದೇಶ ನ್ಯುಮೋನಿಯಾ ಖಾಯಿಲೆ ಹೇಗೆ ಹರಡುತ್ತದೆ, ಅದರ ಲಕ್ಷಣಗಳು ಹಾಗೂ ನ್ಯುಮೋನಿಯ ಖಾಯಿಲೆಯಿಂದ ಮಕ್ಕಳ ಮರಣ ನಿಯಂತ್ರಿಸುವ ಕುರಿತು ಸಾರ್ವಜನಿಕರಿಗೆ ಅರಿವು ಮೂಡಿಸುವುದಾಗಿದೆ. ಕೆಮ್ಮು ಮತ್ತು ಶೀತ ಹೆಚ್ಚಾಗುವುದು, ತೀವ್ರ ಉಸಿರಾಟದ ತೊಂದರೆ, ಪಕ್ಕೆಸೆಳೆತ, ತೀವ್ರ ರೀತಿಯ ಜ್ವರ ನ್ಯುಮೋನಿಯ ಇಂತಹ ಲಕ್ಷಣಗಳಿರುವ ಮಕ್ಕಳನ್ನು ಗುರುತಿಸಿ, ಆಸ್ಪತ್ರೆಗೆ ಕರೆದುಕೊಂಡು ಹೋಗುವ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವಂತೆ ಕ್ಷೇತ್ರ ಸಿಬ್ಬಂದಿಯವರಿಗೆ ಸೂಚಿಸಿದರು.

ನ್ಯುಮೋನಿಯದಿಂದ ಮಕ್ಕಳ ರಕ್ಷಣೆಗಾಗಿ ಹುಟ್ಟಿದ ಅರ್ಧ ಗಂಟೆಯೊಳಗೆ ತಾಯಿಯ ಎದೆಹಾಲು ನೀಡುವುದು ಜೊತೆಗೆ 6 ತಿಂಗಳವರೆಗೆ ಕೇವಲ ತಾಯಿಯ ಎದೆಹಾಲು ಮಾತ್ರ ನೀಡಬೇಕು. 06 ತಿಂಗಳ ನಂತರ ಪೂರಕ ಪೌಷ್ಠಿಕ ಆಹಾರ ನೀಡುವುದು, ಕುಡಿಯುವ ನೀರನ್ನು ಮುಚ್ಚಿಡುವುದು, ಆಹಾರ ತಯಾರಿಸುವ ಮುನ್ನ, ಊಟದ ಮೊದಲು, ಶೌಚಾಲಯಕ್ಕೆ ಹೋಗಿ ಬಂದ ನಂತರ ಕೈಗಳಿಗೆ ಸೋಪು ಬಳಸಿ, ಕೈ ತೊಳೆದುಕೊಳ್ಳುವುದು. ಮಕ್ಕಳಿಗೆ ಸಕಾಲದಲ್ಲಿ ಲಸಿಕೆ ಹಾಕಿಸುವುದು, ಮಕ್ಕಳ ಮೈತುಂಬಾ ಬಟ್ಟೆ ಹಾಕುವುದು, ಮಗುವನ್ನು ಬೆಚ್ಚಗಿಡುವುದು ಈ ರೀತಿಯಾಗಿ ಮುಂಜಾಗ್ರತೆ ತೆಗೆದುಕೊಂಡು ನ್ಯುಮೋನಿಯಾ ಮುಕ್ತ ಜಿಲ್ಲೆಯನ್ನಾಗಿ ಮಾಡಲು ಸಹಕರಿಸುವಂತೆ ಸಾರ್ವಜನಿಕರಿಗೆ ತಿಳಿಸಿ ಹೇಳುವಂತೆ ಸಭೆಯಲ್ಲಿ ಕಾರ್ಯಕ್ಷೇತ್ರ ಸಿಬ್ಬಂದಿಗಳಿಗೆ ತಿಳಿಸಿದರು. ನ್ಯುಮೋನಿಯಾ ಲಕ್ಷಣಗಳು ಕಂಡುಬಂದರೆ ತಕ್ಷಣ ಸಮೀಪದ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡುವಂತೆ ಸಾರ್ವಜನಿಕರಿಗೆ ಮಾಹಿತಿ ನೀಡಲು ಆರೋಗ್ಯ ಸಿಬ್ಬಂದಿಗಳಿಗೆ ಆದೇಶಿಸಿದರು.

ವಿಡಿಯೋ ಸಂವಾದದಲ್ಲಿ ಆರೋಗ್ಯ ಇಲಾಖೆ ಸಿಬ್ಬಂದಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ವ್ಯಾಪಾರ ವೃದ್ಧಿಗೆ
ಜಾಹೀರಾತುಗಳು ಸಹಕಾರಿ!
ಜಾಹೀರಾತಿಗಾಗಿ ಸಂಪರ್ಕಿಸಿ:
Contact for EVENT COVERAGE & Advertisements in Leading News Paper
9448633038

### ನೀವೂ ಬರೆಯಬಹುದು


ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಮರೆಯಬೇಡ ಮಾನವ... ಮರ ಕಲಿಸುವ ಪಾಠವ





**ವೀಣಾ ಹೇಮಂತಗೌಡ ಪಾಟೀಲ್, ಮುಂಡರಗಿ**

ಈ ಪ್ರಕೃತಿಯಲ್ಲಿ ಇರುವ ಹಲವಾರು ವಸ್ತುಗಳಂತೆ ಗಿಡಮರಗಳು ಕೂಡ ನಮಗೆ ಜಡ ವಸ್ತುವಿನಂತೆ ತೋರುತ್ತವೆ. ಆದರೆ ನೆನಪಿರಲಿ... ಗಿಡ ಮರಗಳು ನಮಗೆ ನೀರು, ನೆರಳು, ಗಾಳಿ ಮತ್ತು ಆಸರೆ ನೀಡುವ ಜೀವದಾಯಿನಿಗಳು. ಮರಗಳು ನಮಗೆ ಭೂಮಿ,ಆಕಾಶ,ವಾಯು ಮತ್ತು ನೀರಿನಷ್ಟೇ ಪವಿತ್ರ. ಅಂತೆಯೇ ಭಾರತೀಯ ಸಂಪ್ರದಾಯದಲ್ಲಿ ಬಿಲ್ವದ ಮರ, ಆಲದ ಮರ, ಅರಳಿ ಮರ, ಬನ್ನಿ ಮರ,ತೆಂಗಿನ ಮರ, ಬೇವಿನ ಮರ, ಎಕ್ಕೆ ಗಿಡ, ನೆಲ್ಲಿಕಾಯಿ ಗಿಡ, ಅಶ್ವತ ವೃಕ್ಷಗಳನ್ನು ನಾವು ಪೂಜಿಸುತ್ತೇವೆ.

ಪ್ರತಿಯೊಂದು ಹೊಲಗಳಲ್ಲಿಯೂ ಒಂದೆರಡಾದರೂ ಮರಗಳು ಕಡ್ಡಾಯವಾಗಿ ಇದ್ದು ಹೊಲದಲ್ಲಿ ಕೆಲಸ ಮಾಡಿ ಆಯಾಸಗೊಂಡ ರೈತ ಮರದ ಅಡಿಯಲ್ಲಿ ಕುಳಿತು ದಣಿವಾರಿಸಿಕೊಳ್ಳುತ್ತಾನೆ. ಸಣ್ಣ ಮಗುವಿನ ತಾಯಿ ತಾನು ಹೊಲದಲ್ಲಿ ಕೆಲಸ ಮಾಡುವಾಗ ಮರದ ಕೊಂಬೆಗೆ ಸೀರೆಯನ್ನು ನೇತುಹಾಕಿ ಮಗುವಿಗೆ ಜೋಳಿಗೆ ಮಾಡಿ ಮಲಗಿಸುತ್ತಾಳೆ. ಮನೆಯಲ್ಲಿರುವ ದನ ಕರುಗಳನ್ನು ಹೊಲಕ್ಕೆ ಹೊಡೆದುಕೊಂಡು ಬರುವ ಜನ ಅವುಗಳನ್ನು ತುಸು ಮೇಯಲು ಬಿಟ್ಟು ನಂತರ ಕಟ್ಟಿ ಹಾಕುವುದು ಮರದ ನೆರಳಲ್ಲಿಯೇ. ಮಧ್ಯಾಹ್ನದ ಹೊತ್ತಿನಲ್ಲಿ ಹೊಲದಲ್ಲಿ ಕೆಲಸ ಮಾಡುವವರೆಲ್ಲರೂ ಪ್ರತಿದಿನ ಬುತ್ತಿ ಬಿಚ್ಚಿ ಊಟ ಮಾಡಿ ಹೊಟ್ಟೆ ತುಂಬಿಸಿಕೊಳ್ಳುವುದು ಕೂಡ ಮರದ ನೆರಳಿನಲ್ಲಿಯೆ. ಒಂದು ರೀತಿ ರೈತಾಪಿ ಜನರಿಗೆ ಹೊಲದಲ್ಲಿರುವ ಮರಗಳು ಎರಡನೇ ಮನೆಯಂತೆ.

ಅಷ್ಟೇ ಏಕೆ? ಎಲ್ಲಿಯಾದರೂ ಹೋಗುವಾಗ ದಾರಿಯಲ್ಲಿ ವಾಹನ ಕೆಟ್ಟು ಹೋದರೆ ಅದು ರಿಪೇರಿ ಆಗುವವರೆಗೆ ನಾವು ಹುಡುಕುವುದು ಮರದ ನೆರಳನ್ನು. ಹೆಚ್ಚು ಹೆಚ್ಚು ಮರಗಳಿದ್ದಷ್ಟು ಭೂಮಿಯು ಹೆಚ್ಚೆಚ್ಚು ಮಳೆಯನ್ನು ಆಕರ್ಷಿಸುತ್ತದೆ. ಆದ್ದರಿಂದಲೇ ದಟ್ಟವಾದ, ಒತ್ತಾದ ಕಾಡುಗಳಲ್ಲಿ ಮಳೆಯ ಪ್ರಮಾಣ ಹೆಚ್ಚು. ಮರ ನಮಗೆ ನೆರಳು ಕೊಡುತ್ತದೆ. ಸತತವಾಗಿ ದಣಿದ ಜೀವ ಮರದ ಅಡಿಯಲ್ಲಿ ಹೋಗಿ ಕುಳಿತರೆ, ಅದರ ತಣ್ಣನೆಯ ನೆರಳು ಜೀವಕ್ಕೆ ಸುಖಾನುಭವ ನೀಡುತ್ತದೆ. ಮನಸ್ಸಿಗೆ ಶಾಂತಿ, ತೃಪ್ತಿ ಲಭಿಸುತ್ತದೆ. ಒಂದರೆಗಳಿಗೆ ಮರದ ಕೆಳಗೆ ಮಲಗಿದರೆ ತಾಯಿಯ ಮಡಿಲಿನಲ್ಲಿ ಜೋಗುಳ ಕೇಳುತ್ತಾ ಮಲಗಿದ ಅನುಭವ ನೀಡುತ್ತದೆ. ಮರ ಗಾಳಿಯ ಮೂಲ ಆಕರವಾಗಿರುತ್ತದೆ. ಗಾಳಿ ಬೀಸಲು ಮರದ ರೆಂಬೆ ಕೊಂಬೆಗಳು ತೂಗಾಡುತ್ತಾ ಮರದ ಅಡಿಯಲ್ಲಿ ಕುಳಿತವರಿಗೆ ಧಗೆಯ ಅನುಭವವಾಗದಿರುವಂತೆ ನೋಡಿಕೊಳ್ಳುತ್ತದೆ. ಮಕ್ಕಳ ಬಾಲ್ಯದ ಆಟ ಪಾಠಗಳಿಗೆ ಆಡುಂಬೊಲ ಮರವೇ ಆಗಿದೆ. ಮರದ ಅಡಿಯಲ್ಲಿ ಗಜ್ಜುಗ, ಚೌಕಾಬಾರ, ಹುಲಿಮನೆ ಆಟವನ್ನು ದೊಡ್ಡವರು ಆಡಿದರೆ, ಪುಟ್ಟ ಮಕ್ಕಳು ಚಿಣಿಪಣಿ, ಲಗೋರಿ, ಸರಬಡಿಗೆ ಆಟ, ಗೋಲಿ, ಬಳೆ ಚೂರು, ಕುಂಟೆಬಿಲ್ಲೆ, ಆಣೆಕಲ್ಲುಗಳ ಆಟವನ್ನು ಆಡುತ್ತಾರೆ. ಎಷ್ಟೇ ದೊಡ್ಡವರಾದರೂ ಮರದಡಿಯಲ್ಲಿ ಆಡಿದ ನೆನಪು ಹಚ್ಚಹಸಿರಾಗಿರುತ್ತದೆ. ಊರಿನ ಎಲ್ಲಾ ಆಗುಹೋಗುಗಳಿಗೆ ಊರ ಮುಂದಿನ ಮರ ಸಾಕ್ಷಿಯಾಗಿರುತ್ತದೆ.

ಹಲವಾರು ಪಕ್ಷಿಗಳಿಗೆ ಆಶ್ರಯ ತಾಣವಾಗಿರುತ್ತದೆ ಮರ. ಕ್ರಿಮಿ-ಕೀಟಗಳು, ಪಶು-ಪಕ್ಷಿಗಳು, ಗಾಳಿ-ಮಳೆ, ಚಳಿ- ಬಿಸಿಲು ಮುಂತಾದ ಪ್ರಾಕೃತಿಕ ಕ್ರಿಯೆಗಳಿಂದ ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಮರ ಬೇಕೇ ಬೇಕು. ಮರದಲ್ಲಿ ಸುರಕ್ಷಿತವಾದ ತಾವನ್ನು ಆರಿಸಿ ಅಲ್ಲಲ್ಲಿ ಹೆಕ್ಕಿ ತಂದ ಹುಲ್ಲಿನಿಂದ ಮಾಡಿದ ಗೂಡಿನಲ್ಲಿ ಹಕ್ಕಿಗಳು ತತ್ತಿಗಳನ್ನು ಇಟ್ಟು ರಕ್ಷಿಸುತ್ತವೆ. ಈ ಮೊಟ್ಟೆ ಮರಿಯಾಗುವವರೆಗೆ ನಿರಂತರವಾಗಿ ಅದರ ರಕ್ಷಣೆ ಮಾಡುವುದು ಮರವೇ. ಲಕ್ಷಾಂತರ ಹಕ್ಕಿಗಳ ಪ್ರಭೇದಗಳು ಅಳಿಯದೆ ಉಳಿದು ಕೊಂಡಿರಲು ಕಾರಣ ಮರವೇ ಎಂದರೆ ತಪ್ಪಿಲ್ಲ. ಬಯಸಿ ಬಂದವರಿಗೆ ಆಸರೆ ನೀಡುವ ತಾಯಿಯ ನಂತರದ ಸ್ಥಾನವನ್ನು ವಹಿಸುತ್ತದೆ.

ಮರದ ಯಾವುದೇ ಭಾಗವೂ ನಿಷ್ಪ್ರಯೋಜಕವಲ್ಲ. ಬೇರು ತನ್ನ ಅಡಿಯಲ್ಲಿರುವ ಮಣ್ಣನ್ನು ಗಟ್ಟಿಯಾಗಿ ಹಿಡಿದುಕೊಳ್ಳುವ ಮೂಲಕ ಮಣ್ಣಿನ ಸವಕಳಿಯನ್ನು ತಪ್ಪಿಸಿದರೆ, ಕಾಂಡವು ಅಗಾಧವಾಗಿ ಬೆಳೆದು ಹಲವಾರು ಕ್ರಿಮಿ ಕೀಟಗಳಿಗೆ, ಪಶು ಪಕ್ಷಿಗಳಿಗೆ ಆಶ್ರಯ ತಾಣವಾಗುತ್ತದೆ. ಮನುಷ್ಯರಿಗೆ ಹೂವು, ಹಣ್ಣು ಕೊಡುತ್ತದೆ. ಮರದ ಎಲೆಗಳು ತಮ್ಮ ನಿತ್ಯಹರಿದ್ವರ್ಣದಿಂದ ಆಕರ್ಷಿಸುವುದಲ್ಲದೆ ತಣ್ಣನೆಯ ನೆರಳನ್ನು ಕೊಡುತ್ತವೆ. ಇನ್ನು ಮರ ವಯಸ್ಸಾಗಿ ಒಣಗಿ ಹೋದರೆ ಅದರ ಕಟ್ಟಿಗೆಯ ಭಾಗದಿಂದ ಮನೆಯ ತೊಲೆ, ಕಂಬಗಳು, ಕಿಟಕಿ, ಬಾಗಿಲು ಮತ್ತು ಪೀಠೋಪಕರಣಗಳನ್ನು ನಿರ್ಮಿಸಬಹುದು. ತುಂಡುಗಳಾದರೆ ಉರುವಲಾಗಿ ಬಳಸಬಹುದು. ಗಟ್ಟಿಮುಟ್ಟಾದ ಕಾಂಡಗಳನ್ನು ಚಪ್ಪರಕ್ಕೆ ಹಂದರಕ್ಕೆ ಬಳಸುತ್ತಾರೆ. ಹುಟ್ಟಿದಾಗ ಮಲಗುವ ತೊಟ್ಟಿಲಿನಿಂದ ಹಿಡಿದು ಸತ್ತಾಗ ಕೊನೆಗೆ ಕಟ್ಟುವ ಚಟ್ಟದವರೆಗೂ ನಮಗೆ ಮರದ ಅವಶ್ಯಕತೆ ಇದೆ. ಒಟ್ಟಿನಲ್ಲಿ ಮರ ಯಾವತ್ತಿಗೂ ಉಪಯುಕ್ತವೇ.

ಮರದಿಂದ ನಾವು ಕಲಿಯಬೇಕಾದ ಹಲವಾರು ಪಾಠಗಳಿವೆ. ಮರ ತನ್ನ ಬಳಿ ಬರುವವರಲ್ಲಿ ಬಡವ ಶ್ರೀಮಂತ, ಮೇಲು-ಕೀಳು, ಉಚ್ಛ ನೀಚ ಎಂಬ ಬೇಧವಿಲ್ಲದೆ ಎಲ್ಲರಿಗೂ ಆಸರೆ ನೀಡುತ್ತದೆ. ಕೇವಲ ಮನುಷ್ಯರಷ್ಟೇ ಅಲ್ಲ, ಪಶು ಪಕ್ಷಿಗಳಿಗೂ ಮರದ ಆಸರೆ ದೊರೆಯುತ್ತದೆ. ಅರಸಿ ಬರಬೇಕಷ್ಟೇ!!

ನಾವು ಮನುಷ್ಯರು ಕೂಡ ಎಲ್ಲರಲ್ಲೂ ಇಷ್ಟೇ ನಿಸ್ಪೃಹವಾಗಿ ವರ್ತಿಸಬೇಕು ಎಂಬ ಪಾಠವನ್ನು ಮರದಿಂದ ಕಲಿಯಬೇಕು. ಅದೆಷ್ಟೇ ಮೇಲಕ್ಕೆ ಬೆಳೆದರೂ ಕೂಡ ಮರದ ಬೇರುಗಳು ತನ್ನ ಮೂಲಬೇರನ್ನು ಗಟ್ಟಿಯಾಗಿ ಹಿಡಿದಿಟ್ಟುಕೊಳ್ಳುತ್ತವೆ. ಅದರ ರೆಂಬೆಕೊಂಬೆಗಳು ನಿರಂತರವಾಗಿ ಮರದೊಂದಿಗೆ ಸಂಪರ್ಕ ಹೊಂದಿರುತ್ತವೆ. ಮರಕ್ಕೆ ಅದೆಷ್ಟೇ ಕಲ್ಲೆಸೆದರೂ ಅದು ಕೊಡುವುದು ಸುಗಂಧ ಬೀರುವ ಹೂವು ಮತ್ತು ಸಿಹಿಯಾದ ಹಣ್ಣುಗಳನ್ನು ಮಾತ್ರ. ಅಂತೆಯೇ ಮನುಷ್ಯನು ಕೂಡ ಜೀವನದಲ್ಲಿ ಅದೆಷ್ಟೇ ಮುಂದುವರೆದರೂ, ಔನ್ನತ್ಯಕ್ಕೇರಿದರೂ ತನ್ನ ಮೂಲವನ್ನು ಮರೆಯಬಾರದು. ತನ್ನ ಒಡಹುಟ್ಟಿದವರು ಬಂಧು ಬಾಂಧವರೊಂದಿಗೆ ಸದಾ ಸಂಪರ್ಕದಲ್ಲಿ ಇರಬೇಕು ಎಂಬ ಪಾಠವನ್ನು ನಾವು ಮರದಿಂದ ಕಲಿಯಬೇಕು. ಜೊತೆಗೆ ಸಮಾಜದ ಭಾಗವಾಗಿರುವ ನಾವು ನಮ್ಮನ್ನು ಹೀಯಾಳಿಸುವವರನ್ನು ಮತ್ತು ಹಂಗಿಸಿ ಕಲ್ಲೆಸೆಯುವವರನ್ನು ಕೂಡ "ನಿಂದಿಸುವವರು ನಮ್ಮ ನೆಂಟರು" ಎಂದು ಭಾವಿಸಬೇಕು. ಸಮಾಜದಿಂದ ನಮಗೆ ಅದೆಷ್ಟೇ ಕಹಿಯಾದ ಅನುಭವಗಳು ದೊರೆತರೂ ನಾವು ಸಮಾಜಕ್ಕೆ ಹಿಂತಿರುಗಿ ಕೊಡಬೇಕಾದದ್ದು ನಾವು ಮಾಡುವ ಒಳ್ಳೆಯ ಕೃತ್ಯಗಳನ್ನು ಮಾತ್ರ.

ಮರಗಳು ಕೂಡಿ ಬಾಳುವ ಒಟ್ಟು ಕುಟುಂಬವನ್ನು ಕಾಡು ಎಂದು ಕರೆದರೆ ಆ ಕಾಡಿನಲ್ಲಿ ಅವುಗಳ ಜೊತೆ ಜೊತೆಗೆ ಲಕ್ಷಾಂತರ ಪಶು ಪಕ್ಷಿಗಳಿಗೆ, ಸರೀಸೃಪಗಳಿಗೆ ವಾಸಸ್ಥಾನವನ್ನು ಕಲ್ಪಿಸುತ್ತವೆ. ಮರಗಳಲ್ಲಿ ಹಲವು ಅಡ್ಡಲಾಗಿ ಬೆಳೆದರೆ ಮತ್ತೆ ಕೆಲವು ಗಗನವನ್ನು ಚುಂಬಿಸುವಂತೆ ಮೇಲಕ್ಕೆ ಬೆಳೆಯುತ್ತವೆ. ಮತ್ತೆ ಕೆಲವು ಮರಗಳು ತನ್ನನ್ನು ತಬ್ಬಿ ಹಿಡಿವ ಬಳ್ಳಿಗಳಿಗೆ ಆಸರೆ ನೀಡುತ್ತವೆ. ಇಲ್ಲಿ ಯಾವ ಮರವು ಮತ್ತೊಂದು ಮರಕ್ಕೆ ಪ್ರತಿಸ್ಪರ್ಧಿಯಲ್ಲ. ಇಲ್ಲಿ ನಾವು ನಮ್ಮ ಮನೋ ದೈಹಿಕ ಸಾಮರ್ಥ್ಯಗಳಿಗನುಗುಣವಾಗಿ ಬೆಳೆಯುತ್ತೇವೆ... ಯಾರಿಗೂ ನಾವು ಪ್ರತಿಸ್ಪರ್ಧಿಗಳಲ್ಲ ಜಗದ ಜೀವನ ನಾಟಕದಲ್ಲಿ ನಮ್ಮ ನಮ್ಮ ಪಾತ್ರವನ್ನು ನಾವು ಸರಿಯಾಗಿ ನಿರ್ವಹಿಸಬೇಕು ಎಂಬುದನ್ನು ಮರದಿಂದ ಕಲಿಯಬಹುದು.

ಎಷ್ಟೋ ಬಾರಿ ತನ್ನ ಮುಂದೆ ನಡೆಯುವ ಹಲವಾರು ಘಟನೆಗಳಿಗೆ ಮರವು ಸಾಕ್ಷಿಭೂತವಾಗಿ ನಿಲ್ಲುತ್ತದೆ ಆದರೆ ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ. ಮನುಷ್ಯನು ಕೂಡ ಬದುಕಿನಲ್ಲಿ ತನ್ನ ಕಣ್ಣ ಮುಂದೆ ನಡೆಯುವ ಹಲವಾರು ಘಟನೆಗಳಿಗೆ ಸಾಕ್ಷಿಭೂತನಾಗಿ ನಿಲ್ಲುತ್ತಾನೆ ಆದರೆ ಅನೇಕ ಬಾರಿ ಅವಶ್ಯಕತೆ ಇಲ್ಲದೆಯೇ ತಾನು ಕೂಡ ಆ ಘಟನೆಯ ಭಾಗವಾಗಲು ಪ್ರಯತ್ನಿಸಿ, ತೊಂದರೆಗೆ ಸಿಲುಕಿಕೊಳ್ಳುತ್ತಾನೆ. ಇಲ್ಲಿ ಮನುಷ್ಯ ಮರದಿಂದ ಕಲಿಯಬಹುದಾದದ್ದು 'ಎಲ್ಲವನ್ನು ಗ್ರಹಿಸು, ಆದರೆ ಪ್ರತಿಕ್ರಿಯಿಸಬೇಡ' ಎಂಬ ಪಾಠವನ್ನು.

ಹೀಗೆ ಹುಟ್ಟಿನಿಂದ ಸಾಯುವವರೆಗೆ ನಾವು ಮರದಿಂದ ಕಲಿಯುವ ನೂರಾರು ಪಾಠಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡರೆ ನಮ್ಮ ಬದುಕು ಸಾರ್ಥಕವಾಗುತ್ತದೆ. ಮರದ ಮರ್ಮವ ಅರಿತು ಮನುಜರಾಗೋಣ ವಿಶ್ವ ಮಾನವ ಪ್ರಜ್ಞೆಯನ್ನು ಬೆಳೆಸಿಕೊಳ್ಳೋಣ.

# ಮನುಷ್ಯರಾಗಲು ಬೇಕಿದೆ ಸೃಜನಶೀಲತೆ

ನಮಗೆಲ್ಲರಿಗೂ ಸೃಜನಶೀಲತೆ ಎಂಬುದು ಯಾವಾಗಲೂ ಒಂದು ಬಗೆಯ ಕುತೂಹಲವನ್ನು ಸೃಷ್ಟಿಸುವ ವಿಷಯವಾಗಿದೆ. ಇಲ್ಲಿ ನಮಗೆ ಮೊದಲು ಸ್ಪಷ್ಟತೆ ಇರಬೇಕಾಗಿರುವುದು ಸೃಜನಶೀಲತೆ ಎಂದರೇನು? ಯಾವುದಕ್ಕೆ ಸೃಜನಶೀಲತೆ ಎಂದು ಕರೆಯುತ್ತಾರೆ? ಎಂಬುದರ ಬಗ್ಗೆ. ಸೃಜನಶೀಲತೆ ಎಂಬುದು 'ಹೊಸ ಹೊಸ ಕಲ್ಪನೆಗಳನ್ನು ವಾಸ್ತವಕ್ಕೆ ಪರಿವರ್ತಿಸುವುದಾಗಿದೆ'. ಅಂದರೆ ನಿಘಂಟಿನಲ್ಲಿ ಸೃಜನಶೀಲ ಪದವನ್ನು ಈ ರೀತಿ ಅರ್ಥೈಸಲಾಗಿದೆ.

"ಸೃಜನಶೀಲತೆಯು ಸಾಂಪ್ರದಾಯಿಕ ಕಲ್ಪನೆಗಳು, ನಿಯಮಗಳು, ಮಾದರಿಗಳು, ಸಂಬಂಧಗಳು ಅಥವಾ ಅಂತಹವುಗಳನ್ನು ಮೀರುವ ಸಾಮರ್ಥ್ಯವಾಗಿದೆ, ಮತ್ತು ಅರ್ಥಪೂರ್ಣವಾದ ಹೊಸ ಆಲೋಚನೆಗಳು, ರೂಪಗಳು, ವಿಧಾನಗಳು, ವ್ಯಾಖ್ಯಾನಗಳು ಇತ್ಯಾದಿಗಳನ್ನು ರಚಿಸುವುದು; ಸ್ವಂತಿಕೆ, ಪ್ರಗತಿಶೀಲತೆ ಅಥವಾ ಕಲ್ಪನೆ". ಅಂದರೆ ಸರಳವಾಗಿ ಹೇಳುವುದಾದರೆ ಎಲ್ಲ ಸಾಂಪ್ರದಾಯಿಕ ಮಾರ್ಗಗಳನ್ನು ಮೀರಿ ಹೊಸ ಹೊಸ ಕಲ್ಪನೆಗಳನ್ನು, ಆಲೋಚನೆಗಳನ್ನು ಕಾರ್ಯರೂಪಕ್ಕೆ ಇಳಿಸುವ ಸಾಮರ್ಥ್ಯ.

ಈ ಸೃಜನಶೀಲತೆಯು ಎರಡು ಪ್ರಕ್ರಿಯೆಗಳನ್ನು ಒಳಗೊಂಡಿದೆ

1) ಆಲೋಚನೆ ಮತ್ತು 2) ಉತ್ಪಾದನೆ

ನಾವು ಸುಮ್ಮನೆ ಬರೀ ಆಲೋಚಿಸಿದರೆ ಅದು ಕಾಲ್ಪನಿಕ ಮಾತ್ರ ಆದರೆ ಆ ಹೊಸ ಕಲ್ಪನೆಗಳು ಕಾರ್ಯರೂಪಕ್ಕೆ ಇಳಿದಾಗ ಮಾತ್ರ ಸೃಜನಶೀಲರಾಗಲು ಸಾಧ್ಯವಾಗುತ್ತದೆ .

ಒಂದು ಸಂತಸದ ಸಂಗತಿ ಏನೆಂದರೆ ನಾವೆಲ್ಲರೂ ಸೃಜನಶೀಲರಾಗಿದ್ದೇವೆ,ಆದರೆ ಅದು ಬೇರೆ ಬೇರೆ ರೀತಿಯಲ್ಲಿ, ನಾವು ಮಾಡುವಯಾವುದೇಒಂದುಕ್ರಿಯೆಯುಸಹಸೃಜನಶೀಲವಾಗಿರಬಹುದು. ಈ ಒಂದು ಕಾರಣಕ್ಕಾಗಿಯೇ ಸೃಜನಶೀಲತೆಯನ್ನು ನಾವು ಯಾವುದೇ ಚಟುವಟಿಕೆಗೆ ಸೀಮಿತಗೊಳಿಸಬಾರದು . ಏಕೆಂದರೆ ಈ ಸೃಜನಶೀಲತೆಯು ನಮ್ಮ ಜೀವನದ ಎಲ್ಲ ಆಯಾಮಗಳನ್ನು ಒಳಗೊಳ್ಳುವಂಥದ್ದು. ಉದಾಹರಣೆಗೆ ಒಬ್ಬ ವ್ಯಕ್ತಿಯು ಅಡುಗೆ ಮಾಡುವುದರಲ್ಲಿಯು ಸಹ ಅತ್ಯಂತ ಸೃಜನಶೀಲನಾಗಿರಬಹುದು. ಅದೇ ಆತನಲ್ಲಿರುವ ವಿಶೇಷ ಕೌಶಲ್ಯದ ಸಾಮರ್ಥ್ಯ. ಸೃಜನಶೀಲತೆಯ ಬಗ್ಗೆ ನಮಗಿರುವ ಮಿಥ್ಯ ಕಲ್ಪನೆ ಏನೆಂದರೆ ವಿಶೇಷ ಪ್ರತಿಭಾವಂತರು ಮಾತ್ರ ಸೃಜನಶೀಲರು ಎಂಬುದು,




ಅದಲ್ಲದೆ ಆ ಪ್ರತಿಭೆಯನ್ನು ಅವರು ಹುಟ್ಟಿನಿಂದಲೇ ಪಡೆದಿರುತ್ತಾರೆ ಎಂಬುದು. ನಾನು ನಟನಲ್ಲ, ಹಾಡುಗಾರನಲ್ಲ, ಚಿತ್ರ ಕಲಾವಿದನಲ್ಲ ಆದ್ದರಿಂದ ನಾನು ಸೃಜನಶೀಲನಲ್ಲ ಎಂದು ಯೋಚಿಸುವುದು ಮತ್ತು ನಂಬುವುದು ಇವೇ ನಮ್ಮ ವಿಶ್ವಾಸವನ್ನು ಕಡಿಮೆ ಮಾಡುತ್ತವೆ. ಶೈಕ್ಷಣಿಕ ಮನೋವಿಜ್ಞಾನವು ಹೇಳುವಂತೆ 'ಎಲ್ಲ ಬುದ್ಧಿವಂತರು ಸೃಜನಶೀಲರಲ್ಲ, ಆದರೆ ಸೃಜನಶೀಲರೆಲ್ಲರೂ ಬುದ್ಧಿವಂತರೇ ಆಗಿರುತ್ತಾರೆ' . ಈ ಒಂದು ಕಾರಣಕ್ಕಾಗಿಯೇ ಸೃಜನಶೀಲತೆಯು ನಮ್ಮ ಜೀವನದಲ್ಲಿ ಹೆಚ್ಚು ಪ್ರಾಮುಖ್ಯತೆಯನ್ನು ಪಡೆಯುತ್ತದೆ. ಎಕ್ಸ್ಟರ್ ವಿಶ್ವವಿದ್ಯಾಲಯದ ಒಂದು ಅಧ್ಯಯನದ ಪ್ರಕಾರ ಕೇವಲ ಷೇಕ್ಸ್ಪಿಯರ್, ಪಿಕಾಸೊ ಮತ್ತು ಮೊಜಾರ್ಟ್ ನಂತಹ ಮೇಧಾವಿಗಳು ಮಾತ್ರ ಪ್ರತಿಭಾವಂತರು ಎಂಬುದು ತಪ್ಪು ಕಲ್ಪನೆಯಾಗಿದೆ. ಅಲ್ಲಿನ ಸಂಶೋಧಕರು ಕಲೆ, ಗಣಿತ ಮತ್ತು ಕ್ರೀಡೆಗಳಲ್ಲಿ ಅತ್ಯುತ್ತಮ ಪ್ರದರ್ಶನಗಳನ್ನು ಪರಿಶೀಲಿಸಿ ಕಂಡುಕೊಂಡಿದ್ದೇನೆಂದರೆ, ಉನ್ನತ ಮಟ್ಟದ ಸಾಮರ್ಥ್ಯವನ್ನು ತಲುಪಲು ಒಬ್ಬ ವ್ಯಕ್ತಿಯು ಕೇವಲ ಪ್ರತಿಭೆ ಎಂಬ ಸಹಜ ಸಾಮರ್ಥ್ಯವನ್ನು ಹೊಂದಿರಬೇಕೆಂಬುದೇ ಎಲ್ಲೆಡೆಯೂ ಕಂಡುಬರುವ ಒಂದು ಸಾಮಾನ್ಯ ನಂಬಿಕೆಯಾಗಿದೆ. ಆದರೆ ಒಬ್ಬ ವ್ಯಕ್ತಿಯ ಉನ್ನತ ಮಟ್ಟದ ಸಾಧನೆಯ ಶ್ರೇಷ್ಠತೆಯನ್ನು ಅವಕಾಶಗಳು, ಪ್ರೋತ್ಸಾಹ, ತರಬೇತಿ, ಪ್ರೇರಣೆ ಮತ್ತು ಎಲ್ಲಕ್ಕಿಂತ ಮಿಗಿಲಾಗಿ ಅಭ್ಯಾಸ ಇವುಗಳಿಂದ ಮಾತ್ರ ನಿರ್ಧರಿಸಲಾಗುತ್ತದೆ ಎಂದು ಅಧ್ಯಯನವು ತಿರ್ಮಾನಿಸಿತು. ಈ ವಿಶ್ವವಿದ್ಯಾಲಯದ ಒಂದು ಪ್ರಯೋಗದಲ್ಲಿ ಕೆಲವರು ತರಬೇತಿ ಇಲ್ಲದೆ ತಮ್ಮ ಪೋಷಕರ ಪ್ರೇರಣೆಯಿಂದ ಸಾಧನೆಯ ಹಂತಕ್ಕೆ ತಲುಪುವ ಭರವಸೆಯ ಸೂಚನೆ ನೀಡಿದರು. ಆದರೆ ಸಾವಿರಾರು ಗಂಟೆಗಳ ಗಂಭೀರ ತರಬೇತಿಯನ್ನು ಪಡೆಯದೆ ಯಾರೂ ತಮ್ಮ ಕ್ಷೇತ್ರದಲ್ಲಿ ಉನ್ನತ ಮಟ್ಟದ ಸಾಧನೆಯನ್ನು ಮಾಡಲಿಲ್ಲ. ನಾವಿಲ್ಲಿ ತಿಳಿಯಬೇಕಾದ ವಿಷಯವೇನೆಂದರೆ ಮೊಜಾರ್ಟ್ ರವರ 'ಮಾಸ್ಟರ್ ವರ್ಕ್' ಜಗತ್ತಿನೆಲ್ಲೆಡೆ ಜನಪ್ರೀಯವಾಗುವ ಮೊದಲು 16 ವರ್ಷ ತರಬೇತಿ ಹೊಂದಿದ್ದರು. ಅಂದರೆ ಸೃಜನಶೀಲತೆ ಕಾರ್ಯಗತಗೊಳ್ಳಲು ಎಷ್ಟು ಪ್ರಯತ್ನ ಬೇಕು ಎಂಬುದು.

**ಸೃಜನಶೀಲತೆ ಏಕೆ ಮುಖ್ಯ?**

ಪ್ರಸ್ತುತ ಜಗತ್ತಿನಲ್ಲಿ ಬಹಳ ವೇಗವಾಗಿ ನಡೆಯುತ್ತಿರುವ ಬದಲಾವಣೆಗಳಿಗೆ ಮತ್ತು ಸಂಕೀರ್ಣ ಸಮಸ್ಯೆಗಳಿಗೆ ನವ ನವೀನ ಪರಿಹಾರಗಳಅಗತ್ಯತೆಯಿಂದಾಗಿಸೃಜನಶೀಲತೆಹೆಚ್ಚುಪ್ರಾಮುಖ್ಯತೆಯನ್ನು ಪಡೆದಿದೆ. ಈ ಸೃಜನಶೀಲತೆಯೇ ನಮ್ಮನ್ನು ಮನುಷ್ಯರನ್ನಾಗಿಸುತ್ತದೆ. ಮತ್ತು ಇದು ಪ್ರಗತಿಯ ಜೀವಾಳವಾಗಿದೆ.

ಇಂದಿನ ಕೃತಕ ಬುದ್ಧಿಮತ್ತೆ(ಎಐ)ಯ ಯುಗದಲ್ಲಿ, ಎಐ ನಿಸ್ಸಂದೇಹವಾಗಿ ಒಂದು ಪ್ರಭಲ ಸಾಧನವಾಗಿದ್ದರೂ ಅನುಭವ, ಪರಿಣಿತಿ ಸಹಾನುಭೂತಿಯಿಂದ ಬರುವ ನಮ್ಮ ಮಾನವ ದೃಷ್ಟಿಕೋನ, ಅಂತ:ಪ್ರಜ್ಞೆಮತ್ತುಸೃಜನಶೀಲತೆಗೆಅದು(ಎಐ)ಪರ್ಯಾಯವಾಗಲಾರದು. ಅಲ್ಲದೆ ವಿಮರ್ಶಾತ್ಮಕ ಚಿಂತನೆ, ಸಮಸ್ಯೆ ಪರಿಹಾರ, ಸಂವಹನ ಮತ್ತು ಹೊಂದಾಣಿಕೆಯಂಥಹ ಸೃಜನಶೀಲತೆಗೆ ಮತ್ತು ನಾವಿನ್ಯತೆಗೆ ಅಗತ್ಯವಾದ ಮೃದು ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ಸಾಧ್ಯವಿಲ್ಲ. ಒಟ್ಟಿನಲ್ಲಿ ಸೃಜನಶೀಲತೆಯಲ್ಲಿ ನಾವು ತೊಡಗಿಕೊಂಡಷ್ಟು ಹೆಚ್ಚು ಜಾಗೃತರಾಗುತ್ತೇವೆ, ಗಮನಿಸುವಿಕೆ ತೀವ್ರವಾಗಿರುತ್ತದೆ. ಸಹಜವಾಗಿ ಧೈರ್ಯ, ಸಾಮರ್ಥ್ಯಗಳು ಹೆಚ್ಚಾಗುತ್ತವೆ. ಜಗತ್ತಿನೊಂದಿಗೆ ಸಂಪರ್ಕ ಹೊಂದಿದ ಭಾವ ಮೂಡಿ ನಮ್ಮ ಸ್ವಯಂ ವಾಸ್ತವೀಕರಣಕ್ಕೆ ಅವಕಾಶ ಮಾಡಿಕೊಡುತ್ತದೆ.

**। ಗುರು ಹಿರೇಮಠ**
ಹಗರಿಬೊಮ್ಮನಹಳ್ಳಿ

# ವಿಕಸಿತ ಭಾರತ ಸಂಕಲ್ಪ ಯಾತ್ರೆ

## ಜಿಲ್ಲಾಮಟ್ಟದ ಸಮಿತಿ ಸಭೆಯಲ್ಲಿ ಕಾರ್ಯಕ್ರಮಗಳ ರೂಪರೇಷಗಳ ಕುರಿತು ಸಲಹೆ ನೀಡಿದ ಪೂಜಾಸಿಂಗ್ ಮಂಡೋಲ್

■ **ಹಂಪಿ ಟೈಮ್ಸ್ ಕೊಪ್ಪಳ**

ವಿಕಸಿತ ಭಾರತ ಸಂಕಲ್ಪ ಯಾತ್ರೆ ಪೂರ್ವ ಸಿದ್ಧತೆಗಾಗಿ ನವದೆಹಲಿಯ ಭಾರತ ಸರ್ಕಾರದ ನಾಗರಿಕ ವಿಮಾನಯಾನ ನಿರ್ದೇಶನಾಲಯದ ಜಂಟಿ ಮಹಾನಿರ್ದೇಶಕರಾದ ಪೂಜಾಸಿಂಗ್ ಮಂಡೋಲ ಅವರ ಸಮ್ಮುಖದಲ್ಲಿ ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳನ್ನೊಳಗೊಂಡ ಜಿಲ್ಲಾ ಮಟ್ಟದ ಸಮಿತಿ ಸಭೆಯು ನವೆಂಬರ್ 16ರಂದು ಜಿಲ್ಲಾ ಪಂಚಾಯತ್ ಕಚೇರಿಯ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ನಡೆಯಿತು.

ಈ ವೇಳೆ ಮಾತನಾಡಿದ ಪೂಜಾಸಿಂಗ್ ಅವರು, ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಗಳ ಸೌಲಭ್ಯಗಳಿಂದ ವಂಚಿತರಾದ ಅರ್ಹ ನಾಗರಿಕರಿಗೆ ಅರಿವು ಮೂಡಿಸಿ ಯೋಜನೆಗಳ ಸೌಲಭ್ಯಗಳನ್ನು ಪಡೆದುಕೊಳ್ಳುವಂತೆ ಮಾಡುವುದು, ವಿವಿಧ ಯೋಜನೆಗಳ ಬಗ್ಗೆ ವ್ಯಾಪಕ ಪ್ರಚಾರ ಮತ್ತು ಜಾಗೃತಿ ಮೂಡಿಸುವುದು, ಯೋಜನೆಗಳ ಸೌಲಭ್ಯ ಪಡೆದ ಫಲಾನುಭವಿಗಳ ಯಶೋಗಾಥೆ ಪ್ರಸಾರ ಮಾಡುವುದು ಮತ್ತು ಯಾತ್ರೆಯ ಸಂದರ್ಭದಲ್ಲಿ ಅರ್ಹ ಫಲಾನುಭವಿಗಳನ್ನು ಗುರುತಿಸಿ ನೋಂದಣಿ ಮಾಡುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ ಎಂದು ಅವರು ತಿಳಿಸಿದರು.




ವಿಕಸಿತ ಭಾರತ ಸಂಕಲ್ಪ ಯಾತ್ರೆಯ ವಾಹನವು ಜಿಲ್ಲೆಗೆ ಆಗಮಿಸಿದಾಗ ಗ್ರಾಮ ಪಂಚಾಯತಿಗಳಿಗೆ ಕ್ರಮಾನುಗತವಾಗಿ ಸಂಚರಿಸಲು ರೂಟ್ ಮ್ಯಾಪ್ ಸಿದ್ಧಪಡಿಸಿಕೊಳ್ಳಬೇಕು. ಜಿಲ್ಲಾಮಟ್ಟದ ವಿವಿಧ ಇಲಾಖೆಯ ಅಧಿಕಾರಿಗಳು ತಮ್ಮ ಇಲಾಖೆಯ ಅಧೀನ ಅಧಿಕಾರಿಗಳಿಗೆ ಈ ಬಗ್ಗೆ ಸೂಕ್ತ ತರಬೇತಿ ನೀಡಿ ಸಭೆಗಳನ್ನು ನಡೆಸಿ ಸಿದ್ಧತೆ ಮಾಡಿಕೊಳ್ಳಬೇಕು ಎಂದರು.

ವಾಹನವು ಪ್ರತಿ ದಿನ ಎರಡು ಪಂಚಾಯಿತಿಗಳಿಗೆ ಭೇಟಿ ನೀಡಲಿದ್ದು ವಾಹನವು ಸಂಬಂಧಿಸಿದ ಗ್ರಾಮ ಪಂಚಾಯತ್ ಕೇಂದ್ರಕ್ಕೆ ಆಗಮಿಸಿದಾಗ ಸಂಬಂಧಪಟ್ಟ ಎಲ್ಲಾ ಪಂಚಾಯತ್ ಮಟ್ಟದ ಅಧಿಕಾರಿಗಳು ಹಾಜರಿದ್ದು ತಮ್ಮ ತಮ್ಮ ಇಲಾಖೆಯ ಯೋಜನೆಗಳ ಬಗ್ಗೆ ಮಾರ್ಗಸೂಚಿಯಂತೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ವಿಕಸಿತ ಭಾರತ ಸಂಕಲ್ಪ ಯಾತ್ರೆಯ ಮಾಹಿತಿಯನ್ನು ಆನ್‌ಲೈನ್ ಪೋರ್ಟಲನಲ್ಲಿ ನೋಂದಾಯಿಸಬೇಕು. ಈ ಯಾತ್ರೆಯ ಬಗ್ಗೆ ಜನಪ್ರತಿನಿಧಿಗಳ ಗಮನಕ್ಕೆ ತಂದು ಅಗತ್ಯ ಶಿಷ್ಟಾಚಾರ ಪಾಲನೆ ಮಾಡಬೇಕು ಎಂದು ಸೂಚನೆ ನೀಡಿದರು.

ಈ ವೇಳೆ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಹಾಗೂ ವಿಕಸಿತ ಭಾರತ ಸಂಕಲ್ಪ ಯಾತ್ರೆಯ ನೋಡಲ್ ಅಧಿಕಾರಿಗಳಾದ ಮಲ್ಲಿಕಾರ್ಜುನ ತೊದಲಬಾಗಿ ಅವರು ಮಾತನಾಡಿ, ವಿಕಸಿತ ಭಾರತ ಸಂಕಲ್ಪ ಯಾತ್ರೆಯನ್ನು ಜಿಲ್ಲೆಯಲ್ಲಿ ಯಶಸ್ವಿಗೊಳಿಸಲು ತಾಲೂಕು ಮಟ್ಟದ ಅಧಿಕಾರಿಗಳು ತಮ್ಮ ಹಂತದಲ್ಲಿ ಸಭೆ ನಡೆಸಿ ಅಗತ್ಯ ಸಿದ್ದತೆ ಮಾಡಿಕೊಳ್ಳಬೇಕು. ಸಮಿತಿಯ ಅಧಿಕಾರಿಗಳು ಪರಸ್ಪರ ಸಮನ್ವಯತೆಯಿಂದ ಕಾರ್ಯ ನಿರ್ವಹಿಸಬೇಕು. ಜಿಲ್ಲಾಮಟ್ಟದ ಅಧಿಕಾರಿಗಳು ಇಲಾಖೆಯ ಅಧೀನ ಅಧಿಕಾರಿಗಳಿಗೆ ಸೂಕ್ತ ಆದೇಶ ಹೊರಡಿಸಿ ಮೇಲ್ವಿಚಾರಣೆ ಮಾಡಬೇಕು ಎಂದು ಸೂಚಿಸಿದರು.

ಸಭೆಯಲ್ಲಿ ಲೀಡ್ ಬ್ಯಾಂಕ್ ಮ್ಯಾನೇಜರ್ ವೀರೇಂದ್ರಕುಮಾರ ಕೆ.ಎಂ., ವಿಕಸಿತ ಭಾರತ ಸಂಕಲ್ಪ ಯಾತ್ರೆಯ ಜಿಲ್ಲಾಮಟ್ಟದ ಸಮಿತಿಯ ಸದಸ್ಯರು ಆಗಿರುವ ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳಾದ ರುದ್ರೇಶಪ್ಪ ಟಿ.ಎಸ್., ಲಿಂಗರಾಜ್ ಟಿ., ಶ್ರೀನಿವಾಸ ಕುಲಕರ್ಣಿ, ತಿಪ್ಪಣ್ಣ ಸಿರಸಗಿ, ಚಿದಾನಂದ ಕುರಿ, ಪ್ರಾಣೇಶ, ಗವಿಸಿದ್ದಪ್ಪ ಹೊಸಮನಿ, ವಿಠ್ಠಲ್ ಜಾಬಗೌಡರ್ ಸೇರಿದಂತೆ ಇತರರು ಇದ್ದರು.

# ಮಕ್ಕಳ ಕೈಯಲ್ಲಿ ರಾರಾಜಿಸಿದ ಕನ್ನಡ ಬಾವುಟ

**ಕರ್ನಾಟಕ ಸಂಭ್ರಮ–50ರ ರಥಯಾತ್ರೆಗೆ ಜಿಲ್ಲಾಡಳಿತದಿಂದ ಅದ್ದೂರಿ ಸ್ವಾಗತ। ಗಮನಸೆಳೆದ 500 ಮೀ. ಉದ್ದದ ಕನ್ನಡ ಬಾವುಟ ಮೆರವಣಿಗೆ**




■ **ಹಂಪಿ ಟೈಮ್ಸ್ ಬಳ್ಳಾರಿ**

ಬಳ್ಳಾರಿ ನಗರಕ್ಕೆ ಆಗಮಿಸಿದ ಕರ್ನಾಟಕ ಸಂಭ್ರಮ–50ರ ಜ್ಯೋತಿ ರಥಯಾತ್ರೆಯನ್ನು ಗುರುವಾರ ಅತ್ಯಂತ ಸಂಭ್ರಮ–ಸಡಗರದಿಂದ ಬರ ಮಾಡಿಕೊಳ್ಳಲಾಯಿತು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಮತ್ತು ವಿವಿಧ ಕನ್ನಡ ಪರ ಸಂಘಟನೆಗಳ ಇವರ ಸಂಯುಕ್ತಾಶ್ರಯದಲ್ಲಿ ನಗರದ ಕನಕದುರ್ಗಮ್ಮ ದೇವಸ್ಥಾನದ ಆವರಣದಿಂದ ಹಮ್ಮಿಕೊಂಡಿದ್ದ ಕರ್ನಾಟಕ ಸಂಭ್ರಮ–50ರ ಜ್ಯೋತಿ ರಥಯಾತ್ರೆಯ ಮೆರವಣಿಗೆಯನ್ನು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಕನ್ನಡ ಬಾವುಟ ಹಾರಿಸುವ ಮೂಲಕ ಸ್ವಾಗತಿಸಿದರು.

ಮೆರವಣಿಗೆಗೆ ಮುನ್ನ ವಿವಿಧ ಜಾನಪದ ನೃತ್ಯ ಕಲಾ ತಂಡಗಳಿಂದ ಕನ್ನಡ ಗಾಯನಗಳಿಗೆ ನೃತ್ಯ ಪ್ರದರ್ಶನ ನೀಡಿದ್ದು ಜನಮನ ಸೆಳೆಯಿತು, ನೋಡುಗರ ಚಪ್ಪಾಳೆಗಳ ನಡುವೆ ಸ್ಥಳೀಯ ಕಲಾವಿದರ ಹಲಗೆ, ತಾಷೆ–ರಾಂಡೋಲ್, ಕಂಸಾಳೆ, ವೀರಗಾಸೆ, ಡೊಳ್ಳು ಸೇರಿದಂತೆ ಕಲಾ ತಂಡಗಳಿಂದ ಭರ್ಜರಿ ಸಂಭ್ರಮದ ಮೆರವಣಿಗೆ ಆರಂಭಗೊಂಡಿತು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಉಪಮೇಯರ್ ಬಿ.ಜಾನಕಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಹುಲ್ ಶರಣಪ್ಪ ಸಂಕನೂರು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜೀತ್ ಕುಮಾರ್ ಬಂಡಾರು, ಅಪರ ಜಿಲ್ಲಾಧಿಕಾರಿ ಮೊಹಮ್ಮದ್ ಝುಬೇರ್, ಮಹಾನಗರ ಪಾಲಿಕೆ ಆಯುಕ್ತ ಜಿ.ಖಲೀಲ್ ಸಾಬ್, ಅಬಕಾರಿ ಉಪನಿರೀಕ್ಷಕ ಮಂಜುನಾಥ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ರಮೇಶ್ ಬಾಬು, ತಹಸೀಲ್ದಾರ್ ಗುರುರಾಜ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಟಿ. ಹೊನ್ನುರಪ್ಪ ಸೇರಿದಂತೆ ಪಾಲಿಕೆ ಸದಸ್ಯರು, ಜಿಲ್ಲಾ ಮಟ್ಟದ ಅಧಿಕಾರಿಗಳು ಮತ್ತು ವಿವಿಧ ಕನ್ನಡಪರ ಸಂಘಟನೆಗಳ ಪದಾಧಿಕಾರಿಗಳು, ಶಾಲಾ–ಕಾಲೇಜು ವಿದ್ಯಾರ್ಥಿಗಳು, ಸಾರ್ವಜನಿಕರು ಹಾಗೂ ಮತ್ತಿತರರು ಭಾಗವಹಿಸಿದ್ದರು.

**ಕಣ್ಮನ ಸೆಳೆದ ಕನ್ನಡದ ಧ್ವಜ :**

ಕರ್ನಾಟಕ ಸಂಭ್ರಮ–50ರ ಜ್ಯೋತಿ ರಥಯಾತ್ರೆಯ ಅಂಗವಾಗಿ ಶಾಲಾ ಕಾಲೇಜು ಮಕ್ಕಳ ಕೈಯಲ್ಲಿ 500 ಮೀಟರ್ (ಅರ್ಧ ಕಿ.ಮೀ) ಉದ್ದದ ಕನ್ನಡ ಧ್ವಜದ ಮೆರವಣಿಗೆಯು ನೋಡುಗರನ್ನು ಆಕರ್ಷಿಸಿತು. ಇಂದು ನಗರಕ್ಕೆ ಆಗಮಿಸಿದ ಕನ್ನಡಮ್ಮನ ರಥಯಾತ್ರೆ ನಗರದ ಕನಕ ದುರ್ಗಮ್ಮ ದೇವಸ್ಥಾನದಿಂದ ಆರಂಭಗೊಂಡ ಮೆರವಣಿಗೆಯು ಗಡಿಗಿ ಚೆನ್ನಪ್ಪ ವೃತ್ತದ ಮೂಲಕ ಹಳೆಯ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗದಿಂದ ನೋಂದಣಿ ಕಚೇರಿಯವರೆಗೆ ಸಾಗಿ ಮರಳಿ ಗಡಿಗಿ ಚೆನ್ನಪ್ಪ ವೃತ್ತದ ಮೂಲಕ ಸಂಗಂ ವೃತ್ತಕ್ಕೆ ಬಂದು ರಾಘವ ಕಲಾ ಮಂದಿರದವರೆಗೆ ಕೊನೆಗೊಂಡಿತು. ನಾಳೆ ನಗರದಿಂದ ಕುರುಗೋಡು ತಾಲ್ಲೂಕಿಗೆ ಪಯಣ ಬೆಳೆಸಲಿದೆ. ಮೆರವಣಿಗೆಯ ನಂತರ ಸಂಜೆ ರಾಘವ ಕಲಾಮಂದಿರದಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಜಿಲ್ಲೆಯ ಕನ್ನಡಪರ ಸಂಘಟನೆಗಳ ಸಾರಥ್ಯದಲ್ಲಿ ನಡೆದ ಈ ರಥಯಾತ್ರೆಗೆ ಶ್ರಮಿಸಿದ ಎಲ್ಲರಿಗೂ ಜಿಲ್ಲಾಧಿಕಾರಿಗಳು ಅಭಿನಂದನೆ ಸಲ್ಲಿಸಿದರು.

# ದೇವರಿಗೆ ಖಾಲಿಜಾಗ ಕೊಡಿ

(ಮೊದಲ ಪುಟದಿಂದ)

ನೆಮ್ಮದಿ ಪಡೆಯಲೆಂದು, ಆದರೆ ದೇವಸ್ಥಾನದ ಪಕ್ಕದಲ್ಲೆ ಕಟ್ಟಡ ನಿರ್ಮಿಸಿದರೆ ಭಕ್ತರ ಮನಸ್ಸಿಗೆ ಘಾಸಿಯಾಗುತ್ತದೆ. ಗ್ರಾಮದ ಸರ್ವ ಧರ್ಮದವರು ಆಂಜನೇಯ ದೇವಸ್ಥಾನಕ್ಕೆ ಬರುತ್ತಾರೆ. ಭವಿಷ್ಯದಲ್ಲಿ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯಗಳು ನಡೆಯಬೇಕಿರವುದರಿಂದ ಗ್ರಂಥಾಲಯ ಕಟ್ಟಡವನ್ನು ಬೇರೆಡೆ ನಿರ್ಮಿಸಬೇಕೆಂದು ಒತ್ತಾಯಿಸಿದರು. ಇದೇ ಸಂದರ್ಭದಲ್ಲಿ ಗ್ರಾಮದ ಮುಖಂಡರು ಧ್ವನಿಗೂಡಿಸಿ ದೇವಸ್ಥಾನಕ್ಕೆ ಮೀಸಲಿಡಬೇಕು. ಗ್ರಾಮದ ಬೇರೆ ಸ್ಥಳದಲ್ಲಿ ಗ್ರಂಥಾಲಯ ನಿರ್ಮಿಸಬೇಕೆಂದು ಆಗ್ರಹಿಸಿದರು.

ದೇವಸ್ಥಾನದ ಸಮಿತಿ, ಸರ್ವ ಸಮುದಾಯಗಳ ಒಕ್ಕೂಟ ಹಾಗೂ ಸದ್ಭಕ್ತರಿಂದ ಹಾಗೂ ಸರ್ವ ಸಮುದಾಯಗಳ ಸದಸ್ಯ ವೃಂದದೊಂದಿಗೆ ನಾಗೇನಹಳ್ಳಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಗ್ರಾಮದ ಹಿರಿಯ ಮುಖಂಡರಾದ ಡಿ.ಜಂಬಣ್ಣ, ಗುಂಜಿಹಳ್ಳಿ ಹನುಮಂತಪ್ಪ, ಕರಡಿ ಮಲ್ಲಿಕಾರ್ಜುನಪ್ಪ, ಕೊಟ್ರಯ್ಯ ಸ್ವಾಮಿ, ಗೋಣಿ ಜಂಬಣ್ಣ, ಟಿ.ಪಿ.ಖಾಜಾವಲಿ, ಸಂತೆ ಹನುಮಂತಪ್ಪ, ಮಡಿವಾಳ ಗಾಂದಿಲಿಂಗಪ್ಪ, ಹಂಪಿಕಟ್ಟೆ ಬಸವರಾಜ್, ಟಿ.ಆರ್.ಸುಬ್ಬು, ಕೆ.ಮಂಜುನಾಥ, ಡಿ.ತಾಯಪ್ಪ, ಕರಡಿ ಶಿವಪ್ಪ, ಕೆ.ರವಿ, ನಾಯಕರ ಚಂದ್ರಮ್ಮ, ನಾಯಕರ ಹುಲಿಗೆಮ್ಮ, ಹರಿಜನ ಸೋಮಕ್ಕ, ಕುರುಬರ ಹುಲಿಗೆಮ್ಮ, ಕುಂಬಾರ್ ಪಕ್ಕೀರಮ್ಮ, ತುಳಸಿ ನೇಕರ್, ಯುವ ಶಕ್ತಿ ಒಕ್ಕೂಟ ಮುಖಂಡರಾದ ರವಿಚಂದ್ರ ಚಲುವ, ವರಣ್ ಬಾರಿಕಾರ್, ರಾಕೇಶ್ ಕೆಲ್ಸೇರ್, ಬಸವರಾಜ್.ಜೆ.ಡಿ. ಜಿ.ಕೆ.ಹನುಮಂತಪ್ಪ, ಹಾಗೂ ದೇವಸ್ಥಾನದ ಸಮಿತಿ ಸೇರಿದಂತೆ ಗ್ರಾಮಸ್ಥರು ಇದ್ದರು.

# ಸಾಗುವಳಿ ಜಮೀನು ವಿವರ ಫ್ರೂಟ್ಸ್ ತಂತ್ರಾಂಶದಲ್ಲಿ ನೋಂದಾಯಿಸಿ

## ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಸೂಚನೆ

■ **ಹಂಪಿ ಟೈಮ್ಸ್ ಬಳ್ಳಾರಿ**

ರಾಜ್ಯ ಸರ್ಕಾರದ ಕಂದಾಯ, ಕೃಷಿ, ತೋಟಗಾರಿಕೆ, ರೇಷ್ಮೆ, ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಗಳ ವಿವಿಧ ಯೋಜನೆಗಳಡಿ ಜಿಲ್ಲೆಯ ರೈತರು ವಿವಿಧ ಸೌಲಭ್ಯಗಳನ್ನು ಪಡೆಯಲು ತಮ್ಮ ಹಕ್ಕಿನಲ್ಲಿರುವ ಎಲ್ಲಾ ಸಾಗುವಳಿ ಭೂಮಿಗಳ ವಿವರಗಳನ್ನು ಫ್ರೂಟ್ಸ್ ತಂತ್ರಾಂಶದಲ್ಲಿ ನೋಂದಾಯಿಸಬೇಕು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದ್ದಾರೆ.

ರಾಜ್ಯ ಸರ್ಕಾರವು ರೈತರ ಹಿತದೃಷ್ಟಿಯಿಂದ NIC ಸಹಯೋಗದೊಂದಿಗೆ FRUITS (Farmer Registration and Unified Beneficiary Information System) ಎಂಬ ಸಾಫ್ಟ್‌ವೇರ್ ಅಪ್ಲಿಕೇಷನ್ ಅನ್ನು ಅಭಿವೃದ್ಧಿಪಡಿಸಲಾಗಿದೆ.

ರೈತರು ಕೃಷಿ ಅಥವಾ ತೋಟಗಾರಿಕೆ ಬೆಳೆಗಳನ್ನು ಬೆಳೆಯುವುದು, ರೇಷ್ಮೆ, ಡೈರಿ, ಪೌಲ್ಟ್ರಿ, ಮೀನುಗಾರಿಕೆ ಮುಂತಾದ ಕೃಷಿ ಹಾಗೂ ಕೃಷಿ ಸಂಬಂಧಿತ ವಿಭಿನ್ನ ಚಟುವಟಿಕೆಗಳನ್ನು ಕೈಗೊಳ್ಳುವ ನಿಟ್ಟಿನಲ್ಲಿ, ಪ್ರತಿಯೊಂದು ಚಟುವಟಿಕೆಗೆ ವಿಭಿನ್ನ ಜ್ಞಾನ ಮತ್ತು ಅನುಭವದ ಅಗತ್ಯತೆ ಇರುತ್ತದೆ.

ಫ್ರೂಟ್ಸ್ ತಂತ್ರಾಂಶದಲ್ಲಿ ಬೆಳೆ ಸಮೀಕ್ಷೆ, ಬೆಳೆ ವಿಮೆ, ಬೆಳೆ ಪರಿಹಾರ ಮತ್ತು ಇನ್ನಿತರ ಯೋಜನೆಗಳಿಗೆ ಲಿಂಕ್ ಮಾಡಲಾಗಿರುತ್ತದೆ. ಆದ್ದರಿಂದ ರೈತರು ತಮ್ಮ ಹಕ್ಕಿನಲ್ಲಿರುವ ಎಲ್ಲಾ ಸಾಗುವಳಿ ಭೂಮಿಗಳ ವಿವರಗಳನ್ನು ಫ್ರೂಟ್ಸ್ ತಂತ್ರಾಂಶದಲ್ಲಿ ಸೇರಿಸಲು ಪಹಣಿ ಪತ್ರ ಮತ್ತು ಆಧಾರ್ ಸಂಖ್ಯೆ ಹಾಗೂ ಆಧಾರ್ ಸಂಖ್ಯೆಗೆ ಜೋಡಣೆಯಾದ ಬ್ಯಾಂಕ್ ಖಾತೆ ಮಾಹಿತಿ ನೀಡಬೇಕು.

ಹೆಚ್ಚಿನ ಮಾಹಿತಿಗಾಗಿ ಹತ್ತಿರದ ಕಂದಾಯ, ಕೃಷಿ, ತೋಟಗಾರಿಕೆ, ರೇಷ್ಮೆ, ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಯ ಅಧಿಕಾರಿಗಳನ್ನು ಸಂಪರ್ಕಿಸಬಹುದು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಉಚಿತ ಬ್ಯೂಟಿಪಾರ್ಲರ್ ತರಬೇತಿ: ನೋಂದಣಿಗೆ ಆಹ್ವಾನ

## ಡಿಸೆಂಬರ್ 01ರೊಳಗೆ ಹೆಸರು ನೊಂದಾಯಿಸಿ

■ **ಹಂಪಿ ಟೈಮ್ಸ್ ಬಳ್ಳಾರಿ**

ಕೆನರಾ ಬ್ಯಾಂಕ್ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆಯಿಂದ ಗ್ರಾಮೀಣ ಪ್ರದೇಶದ 20 ರಿಂದ 45 ವಯೋಮಿತಿಯೊಳಗಿನ ನಿರುದ್ಯೋಗಿ ಯುವತಿಯರಿಗಾಗಿ ಉಚಿತ ಬ್ಯೂಟಿಪಾರ್ಲರ್ ತರಬೇತಿಗೆ ಆಸಕ್ತರಿಂದ ಅರ್ಜಿ ಆಹ್ವಾನಿಸಲಾಗಿದೆ.

ಡಿ.04ರಿಂದ ತರಬೇತಿ ಆರಂಭವಾಗಲಿದ್ದು, ತರಬೇತಿಯ ಅವಧಿಯು 30 ದಿನಗಳಾಗಿರುತ್ತದೆ. ಊಟ ವಸತಿಯೊಂದಿಗೆ ತರಬೇತಿಯು ಸಂಪೂರ್ಣವಾಗಿ ಉಚಿತವಾಗಿರುತ್ತದೆ. ಕೌಶಲ್ಯದ ಜೊತೆಗೆ ಉದ್ಯಮಶೀಲತೆ, ವ್ಯಕ್ತಿತ್ವ ವಿಕಾಸನಕ್ಕೆ ಸಂಬಂಧಿಸಿದ ಮಾಹಿತಿ ನೀಡಲಾಗುತ್ತದೆ.

ಈ ಕ್ಷೇತ್ರದಲ್ಲಿ ಪ್ರಾಥಮಿಕ ಜ್ಞಾನ ಹೊಂದಿರುವ ಹಾಗೂ ಬಿ.ಪಿ.ಎಲ್ ಕಾರ್ಡ್ ಹೊಂದಿದ್ದು ಕನ್ನಡವನ್ನು ಓದಲು ಹಾಗೂ ಬರೆಯಲು ಬರುವಂತಹ ನಿರುದ್ಯೋಗಿ ಸ್ವ–ಉದ್ಯೋಗ ಆಕಾಂಕ್ಷಿಗಳು ಮತ್ತು ಗ್ರಾಮೀಣ ಪ್ರದೇಶದ ಅಭ್ಯರ್ಥಿಗಳು ತರಬೇತಿಯಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ. ವಿದ್ಯಾರ್ಹತೆ ಕನಿಷ್ಠ 10ನೇ ತರಗತಿ ಪಾಸಾಗಿರಬೇಕು. ತರಬೇತಿಯ ಬಗ್ಗೆ ಪ್ರಾಥಮಿಕ ಅನುಭವ ಹೊಂದಿದವರಿಗೆ ಆದ್ಯತೆ ನೀಡಲಾಗುವದು.

35 ಜನರಿಗೆ ಮಾತ್ರ ತರಬೇತಿ ನೀಡಲಾಗುತ್ತಿದ್ದು, ಸಂದರ್ಶನಮೂಲಕಆಯ್ಕೆಮಾಡಲಾಗುವುದು. ನಮ್ಮ ಸಂಸ್ಥೆಯಲ್ಲಿ ಈ ಮೊದಲು ತರಬೇತಿ ಪಡೆದವರು ಪುನಃ ತರಬೇತಿ ಪಡೆಯಲು ಅರ್ಹರಿರುವುದಿಲ್ಲ. ಆಸಕ್ತ ಅರ್ಹ ಅಭ್ಯರ್ಥಿಗಳು ತ್ವರಿತವಾಗಿ ತಮ್ಮ ಹೆಸರು, ವಿಳಾಸ, ಸಂಪರ್ಕಕ್ಕೆ ಲಭ್ಯವಿರುವ ದೂರವಾಣಿ ಸಂಖ್ಯೆ, ವಯಸ್ಸು, ವಿದ್ಯಾರ್ಹತೆ, ಪಡೆಯಲಿಚ್ಚಿಸಿರುವ ತರಬೇತಿ, ಸಂಬಂಧಿತ ವಿಷಯದಲ್ಲಿ ಇರುವ ಪ್ರಾಥಮಿಕ ಜ್ಞಾನ, ಅನುಭವ ಹೊಂದಿದವರು ಖುದ್ದಾಗಿ ಅಗತ್ಯ ಮಾಹಿತಿ ನೀಡಿ ಡಿ.01ರೊಳಗೆ ಹೆಸರು ನೊಂದಾಯಿಸಬಹುದು. ತರಬೇತಿಯಲ್ಲಿ ಪಾಲ್ಗೊಳ್ಳಲು ತಗುಲುವ ಪ್ರಯಾಣ ಭತ್ಯೆಯನ್ನು ತಾವೇ ಭರಿಸಬೇಕು.



ಹೆಚ್ಚಿನ ಮಾಹಿತಿಗಾಗಿ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ಹತ್ತಿರದ ಡಿ.ಐ.ಸಿ ಕಾಂಪೌಂಡ್‌ನ ಕೆನರಾ ಬ್ಯಾಂಕ್ ಗ್ರಾಮೀಣ ಸ್ವ–ಉದ್ಯೋಗ ತರಬೇತಿ ಸಂಸ್ಥೆ ನಿರ್ದೇಶಕರ ಕಚೇರಿ ಅಥವಾ ದೂ.08392–299117, ಮೊ.9449860659, 9008464120 ಗೆ ಸಂಪರ್ಕಿಸಬಹುದು ಎಂದು ಸಂಸ್ಥೆಯ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಆಧಾರ್ ಜೋಡಣೆ ಕಡ್ಡಾಯ

■ **ಹಂಪಿ ಟೈಮ್ಸ್ ಬಳ್ಳಾರಿ**

ರಾಜ್ಯ ಸರ್ಕಾರದ ವಿವಿಧ ಯೋಜನೆಗಳಾದ ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ಯೋಜನೆಗಳಾದ ವೃದ್ಯಾಪ್ಯ ವೇತನ, ಸಂಧ್ಯಾ ಸುರಕ್ಷಾ ವೇತನ, ವಿಧವಾ ವೇತನ, ಅಂಗವಿಕಲ ವೇತನ, ಮನಸ್ವಿನಿ ಮತ್ತು ಮೈತ್ರಿ ಯೋಜನೆಗಳನ್ನು ಪಡೆಯುತ್ತಿರುವ ಬಳ್ಳಾರಿ ತಾಲೂಕು ಹಾಗೂ ಗ್ರಾಮಾಂತರ ವ್ಯಾಪ್ತಿಯ ಅರ್ಹ ಫಲಾನುಭವಿಗಳು ತಮ್ಮ ಬ್ಯಾಂಕ್ ಖಾತೆ ಮತ್ತು ಅಂಚೆ ಖಾತೆಗಳಿಗೆ ಕಡ್ಡಾಯವಾಗಿ ಆಧಾರ್ ಜೋಡಣೆ ಮಾಡಬೇಕು ಎಂದು ತಹಶೀಲ್ದಾರ ಗುರುರಾಜ ಅವರು ತಿಳಿಸಿದ್ದಾರೆ. ಒಂದು ವೇಳೆ ಫಲಾನುಭವಿಗಳು ಆಧಾರ್ ಜೋಡಣೆಯನ್ನು ಮಾಡಿಸದಿದ್ದಲ್ಲಿ ಸರ್ಕಾರದಿಂದ ಪಾವತಿಸುವ ವೇತನವು ನವೆಂಬರ್‌ನಿಂದ ಸ್ಥಗಿತಗೊಳ್ಳಲಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಕವಿ ಮನಸು**

### ಆ ಕಣ್ಣೀರು ಕಾಣಿಸದು ಯಾರಿಗೂ

ಅಂದು ನಾ ಜಗತ್ತಿಗೆ ಬಂದಾಗ
ಅಳಲು ಶುರು ಮಾಡಿದಾಗ
ನನ್ನೊಂದಿಗೆ ಒಂದು ಜೀವ
ರೋಧಿಸುತ್ತಿತ್ತು
ಆ ಕಣ್ಣೀರು ಕಾಣಿಸದು
ಯಾರಿಗೂ..

ಕಂದನ ನೋಡುತ್ತಾ ತನ್ನ
ನೋವುಗಳನ್ನ ಮರೆಯುತ್ತಾ
ಅಪ್ಪಿ ಮುದ್ದಾಡುತ್ತಾ
ನನ್ನ ಕನಸೇ ನೀನೆಂದವಳ
ಆ ಕಣ್ಣೀರು ಕಾಣಿಸದು
ಯಾರಿಗೂ..

ಬಿದ್ದ ಮಗುವ
ಏನು ಆಗಿಲ್ಲವೆಂದು ಬೆನ್ನು
ತಟ್ಟುತ್ತಾ ನೋವನ್ನು
ನುಂಗುವವಳ ಆ ಕಣ್ಣೀರು
ಕಾಣಿಸದು ಯಾರಿಗೂ..

ಬದುಕಿನ ಗೂಡನ್ನು ಕಟ್ಟಿಕೋ
ಮಗು ಭದ್ರವಾಗಿ ನಿಲ್ಲು ಎಂದು
ಕಠೋರವಾಗಿ
ಮಾತನಾಡುವವಳ
ಆ ಕಣ್ಣೀರು ಕಾಣಿಸದು
ಯಾರಿಗೂ..

ಅಯ್ಯೋ ನನ್ನ ಕಂದ ಮತ್ತೆ
ಒಂಟಿಯಾಯಿತಲ್ಲ
ನನ್ನ ಮಗುವಿನ ಮುಂದಿನ
ಜೀವನ ಏನೆಂದು ದೇವರನ್ನು
ಕೇಳುವವಳ ನಾ ಕಣ್ಣೀರು
ಕಾಣಿಸೋದು ಯಾರಿಗೂ..

ನಿಂತಲ್ಲಿ ನಿಲ್ಲಬೇಡ ಕಂದ
ಮುಂದೆ ನೂರು ದಾರಿಯಿವೆ
ನಿನ್ನೊಂದಿಗೆ ನಾನಿರುವೆ
ಎನ್ನುವವಳ ಆ ಕಣ್ಣೀರು
ಕಾಣಿಸದು ಯಾರಿಗೂ..

। ಜಿ ಆರ್ ಬಸವರಾಜೇಶ್ವರಿ
ಹಗರಿ ಗಜಾಪುರ

### ಮಕ್ಕಳು ಅರಸರಾಗಬೇಕೆ?

ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?

ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ ಚಾನಲ್
FREE! hampitimes epaper
save your mobile space !
SCAN QR CODE TO JOIN FOLLOW
HAMPI TIMES
whatsapp channel

### ತುಂಗಭದ್ರಾ ನೀರಿನ ಮಟ್ಟ



| ಗುರುವಾರ : 16-11-2023 | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1601.89 ಅಡಿ |
| ಒಳ ಹರಿವು | 1829 ಕ್ಯುಸೆಕ್ |
| ಹೊರ ಹರಿವು | 8450 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 24.642 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1631.29 ಅಡಿ |
| ಒಳ ಹರಿವು | 4228 ಕ್ಯುಸೆಕ್ |
| ಹೊರ ಹರಿವು | 8060 ಕ್ಯುಸೆಕ್ |
| ಸಾಮರ್ಥ್ಯ | 99.000 ಟಿಎಂಸಿ |

TANDUR HOSPITAL
ತಾಂಡೂರ ಆಸ್ಪತ್ರೆ
A Multy-Specialty hospital run by 3rd generation of doctors
ಡಾ.ಸ್ನೇಹಾ ಅಮರ್‌ಜೀತ್ ತಾಂಡೂರ
ಚರ್ಮರೋಗ ತಜ್ಞರು, ಈಸ್ಥೆಟಿಷಿಯನ್ ಮತ್ತು ಡರ್ಮಟೊಸರ್ಜನ್
ಎಂ.ಬಿ.ಬಿ.ಎಸ್., ಎಂ.ಡಿ (ಡಿವಿಎಲ್)
Your Health is Our Priority
24/7 SERVICE Emergency
ಮೊಡವೆ | ತೊನ್ನು | ಸೋರಿಯಾಸೀಸ್ | ಫಂಗಲ್ | ಸೋಂಕುಗಳು | ಕುಷ್ಠ ರೋಗ | ಚರ್ಮದ ಬೆಳವಣಿಗೆಗಳು | ಕೂದಲು ಉದುರುವಿಕೆ| ಬಟ್ಟತಲೆ | ಬಿಳಿಕೂದಲು | ಅತಿಯಾಗಿ ಬೆವರುವುದು | ಉಗುರಿನ ಸಮಸ್ಯೆಗಳು | ಅಲರ್ಜಿಗಳು | ಚರ್ಮದ ದದ್ದುಗಳು | ಮಕ್ಕಳ ಚರ್ಮದ ಸಮಸ್ಯೆಗಳು ಇತ್ಯಾದಿ
ಮೊ: 9324871459, 08394-358161 ಸರ್ದಾರ್ ಪಟೇಲ್ ರೋಡ್, ಪಟೇಲ್ ನಗರ, ಹೊಸಪೇಟೆ

# ಹಂಪಿ-ಅಯೋಧ್ಯ ಎಕ್ಸ್‌ಪ್ರೆಸ್ ರೈಲು ಆರಂಭಕ್ಕೆ ಆಗ್ರಹ

**ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ರೈಲ್ವೇ ಅಭಿವೃದ್ಧಿ ಕ್ರಿಯಾ ಸಮಿತಿ ಪದಾಧಿಕಾರಿಗಳು ಗುರುವಾರ ಸ್ಥಳಿಯ ರೈಲ್ವೇ ಪ್ರಾದೇಶಿಕ ಅಧಿಕಾರಿ ಮೂಲಕ ನೈಋತ್ಯ ರೈಲ್ವೇ ಪ್ರಧಾನ ವ್ಯವಸ್ಥಾಪಕರಿಗೆ ಮನವಿ ಪತ್ರ ಸಲ್ಲಿಸಿದರು.

ಕ್ರಿಯಾ ಸಮಿತಿಯ ಅಧ್ಯಕ್ಷರಾದ ವೈ.ಯಮುನೇಶ್ ಮಾತನಾಡಿ, ಕಳೆದ ಹಲವಾರು ದಶಕಗಳಿಂದ ಧಾರ್ಮಿಕ ವಿವಾದದ ಕೇಂದ್ರ ಬಿಂದುವಾದ ಅಯೋಧ್ಯ ರಾಮಜನ್ಮ ಭೂಮಿ ವಿವಾದವು ಸುಪ್ರೀಂ ಕೋರ್ಟ್ ಹಾಗೂ ರಾಷ್ಟ್ರಪತಿಗಳ ಮಧ್ಯಸ್ಥಿಕೆಯಿಂದ ಸೌಹಾರ್ದಯುತವಾಗಿ ಬಗೆಹರಿದಿದ್ದು, ಮುಂದಿನ ವರ್ಷ ಜನವರಿ 22 ರಂದು ಬೃಹತ್ ರಾಮಮಂದಿರ ಉದ್ಘಾಟನೆ ಆಗಲಿದೆ ಎಂದು ರಾಮಜನ್ಮ ಭೂಮಿ ಟ್ರಸ್ಟ್ ಪ್ರಕಟಿಸಿದೆ. ಈ ಹಿನ್ನೆಲೆಯಲ್ಲಿ ರಾಮಜನ್ಮಭೂಮಿ ಅಯೋಧ್ಯ ಹಾಗೂ ಆಂಜನೇಯನ ಜನ್ಮಸ್ಥಳ ಅಂಜನಾದ್ರಿ ನಡುವೆ ನೇರ ರೈಲು ಸಂಪರ್ಕ ಕಲ್ಪಿಸುವ ಅಗತ್ಯವಿದೆ. ವಾಲ್ಮೀಕಿ ರಾಮಾಯಣದ ಏಳು ಕಾಂಡಗಳಲ್ಲಿ ಕಿಷ್ಕಿಂದ ಕಾಂಡವು ಒಂದಾಗಿದೆ. ರಾಮನು ಸೀತಾನ್ವೇಷಣೆಗೆ ತೆರಳುವ ಮಾರ್ಗದಲ್ಲಿ ಕಿಷ್ಕಿಂದ ಪ್ರದೇಶಕ್ಕೆ ಬಂದು ಹಲವು ತಿಂಗಳುಗಳ ಕಾಲ ಈ ಪ್ರದೇಶದಲ್ಲಿ ತಂಗಿದ್ದರು ಎಂಬ ನಂಬಿಕೆ ಹಲವು ಶತಮಾನಗಳಿಂದ ಜನಜನಿತವಾಗಿದ್ದು, ಈ ನಿಟ್ಟಿನಲ್ಲಿ ಹಲವಾರು ಗ್ರಂಥಗಳಲ್ಲಿ ದಾಖಲಾಗಿರುವುದಲ್ಲದೇ ಇಂದಿಗೂ ಅನೇಕ ಕುರುಹುಗಳು ದೊರೆಯುತ್ತವೆ. ಹೀಗೆ ವಾಲ್ಮೀಕಿ ರಾಮಾಯಣದ ಕಿಷ್ಕಿಂದ ಕಾಂಡದಲ್ಲಿ ದಾಖಲಿಸಿರುವಂತೆ ರಾಮ, ಲಕ್ಷ್ಮಣರು ಆಂಜನೇಯ ಮತ್ತು ವಾನರ ಸೇನೆಯನ್ನು ಭೇಟಿ ಮಾಡಿ ಲಂಕೆಗೆ ತೆರಳಿ ರಾವಣನನ್ನು ಸೋಲಿಸಿ ಸೀತೆಯನ್ನು ಬಂದಮುಕ್ತಗೊಳಿಸಿದರು.




ಹಂಪಿ ಪರಿಸರದಲ್ಲಿರುವ ಮಾತಂಗ ಪಂಪಾ ಸರೋವರ, ಮಾತಂಗ ಪರ್ವತ, ಋಷ್ಯಮೂಕ ಪರ್ವತ, ಅಂಜನಾದ್ರಿ, ಮಾಲ್ಯವಂತ ಮುಂತಾದ ಪ್ರದೇಶಗಳಲ್ಲಿ ರಾಮ, ಲಕ್ಷ್ಮಣ, ಆಂಜನೇಯ ತಿರುಗಾಡಿದ ಕುರುಹುಗಳಿವೆ. ಅಲ್ಲದೇ ರಾಮಾ ಮತ್ತು ಆಂಜನೇಯ ಪರಸ್ಪರ ಅವಿಭಾಜ್ಯ ದೈವಿ ಪುರುಷರಾಗಿರುವುದರಿಂದ ರಾಮಜನ್ಮಭೂಮಿ ಅಯೋಧ್ಯ ಮತ್ತು ಆಂಜನೇಯನ ಜನ್ಮಸ್ಥಳ ಅಂಜನಾದ್ರಿ ನಡುವೆ ನೇರ ರೈಲು ಸಂಪರ್ಕ ಕಲ್ಪಿಸುವ ಅಗತ್ಯವಿದೆ. ಇದರಿಂದ ಉತ್ತರ ಹಾಗೂ ದಕ್ಷಿಣ ಭಾರತ ನಡುವೆ ಸಾಂಸ್ಕೃತಿಕ, ಧಾರ್ಮಿಕ ಭಾವೈಕ್ಯತೆ ಮೂಡಿ ಈ ಭಾಗದಲ್ಲಿ ಪ್ರವಾಸೋದ್ಯಮ ಹಾಗೂ ಆರ್ಥಿಕ ಬೆಳವಣಿಗೆಗೆ ಅನುಕೂಲವಾಗುತ್ತದೆ ಎಂದರು.

ರೈಲ್ವೇ ಇಲಾಖೆಯು ರಾಮಜನ್ಮಭೂಮಿ ಅಯೋಧ್ಯ ಮತ್ತು ಹಂಪಿ-ಹೊಸಪೇಟೆ ನಡುವೆ ರೈಲು ಆರಂಭಿಸಬೇಕು. ಈ ಮುಂಚೆ ಹುಬ್ಬಳ್ಳಿ-ಗುಂತಕಲ್ ನಡುವೆ ಸಂಚರಿಸುತ್ತಿದ್ದ, ಪ್ಯಾಸಿಂಜರ್ ಗಾಡಿ ಸಂಖ್ಯೆ : 07337/07338 ಗಾಡಿಯು ತೋರಣಗಲ್ ವರೆಗೆ ಮಾತ್ರ ಸಂಚರಿಸುತ್ತಿರುವುದರಿಂದ ಪ್ರಯಾಣಿಕರಿಗೆ ವಿಪರೀತ ತೊಂದರೆಯಾಗುತ್ತಿದೆ. ಈ ರೈಲನ್ನು ಕೂಡಲೇ ಬಳ್ಳಾರಿ ವರೆಗೆ ವಿಸ್ತರಿಸಬೇಕು. ಹೊಸಪೇಟೆ-ಬಳ್ಳಾರಿ ಹಾಗೂ ಬಳ್ಳಾರಿ-ಹರಿಹರ-ಬಳ್ಳಾರಿ ನಡುವೆ ಸಂಚರಿಸುತ್ತಿರುವ ಗಾಡಿ ಸಂಖ್ಯೆ : 07397/07398 ಮತ್ತು 07395/07396 ಈ ಗಾಡಿಗಳು ಅನಿರ್ಧಿಷ್ಟ ತಡವಾಗಿ ಸಂಚರಿಸುತ್ತಿದ್ದು, ಪ್ರಯಾಣಿಕರಿಗೆ ವಿಪರೀತ ತೊಂದರೆ ಉಂಟಾಗುತ್ತಿದ್ದು, ಕೂಡಲೇ ಈ ರೈಲುಗಳ ಸಮಯಪಾಲನೆ ಮಾಡಬೇಕೆಂದು ಕೋರಲಾಯಿತು.

ಮನವಿ ಪತ್ರ ಸ್ವೀಕರಿಸಿ ಮಾತನಾಡಿದ ಸ್ಥಳಿಯ ರೈಲ್ವೇ ಪ್ರಾದೇಶಿಕ ಅಧಿಕಾರಿ ಗಿರೀಶ್ ಕಲಗೊಂಡ ಅವರು, ಶೀರ್ಘವೇ ತಮ್ಮ ಎಲ್ಲಾ ಬೇಡಿಕೆಗಳನ್ನು ಹಿರಿಯ ಅಧಿಕಾರಿಗಳ ಗಮನಕ್ಕೆ ತಂದು ಬೇಡಿಕೆಗಳ ಈಡೇರಿಸುವ ಪ್ರಮಾಣಿಕ ಪ್ರಯತ್ನ ಮಾಡುವುದಾಗಿ ಹೇಳಿದರು. ಈ ಸಂದರ್ಭದಲ್ಲಿ ಮಹೇಶ್ ಕುಡತಿನಿ, ಯು.ಅಶ್ವತಪ್ಪ, ಟಿ.ಆರ್.ತಿಪ್ಪೇಸ್ವಾಮಿ,ಉಮಾಮಹೇಶ್ವರ್,ಬಿ.ವಿರುಪಾಕ್ಷಪ್ಪ, ಸಿ.ಎ.ಮಲ್ಲಿಕಾರ್ಜುನ, ವರುಣ್.ಜೆ.ಕೆ, ದಾನೇಶ್ ಜಿಲ್ಲಾಧ್ಯಕ್ಷರು ರೈತ ಸಂಘ, ಶಂಕರ್ ಗೌಡ ರೈತ ಮುಖಂಡರು, ಹೆಚ್.ತಿಪ್ಪೇಸ್ವಾಮಿ ವಿನಾಯಕ ನಗರ ಬಡಾವಣೆ ಅಧ್ಯಕ್ಷರು, ಎಸ್.ಎಂ.ಬಾಷಾ, ಕೆ.ಲಕ್ಷ್ಮಣ, ನಜೀರ್ ಸಾಬ್, ಆರ್.ಶರಣಬಸವನಗೌಡ, ಹೆಚ್. ಮಹೇಶ್ ಇತರರಿದ್ದರು.

## ಮತದಾರರ ಪಟ್ಟಿಯ ಪರಿಷ್ಕರಣೆ ವಿಶೇಷ ಅಭಿಯಾನ: ಡಿಸಿ ಪ್ರಶಾಂತ್ ಕುಮಾರ್

**ಹಂಪಿ ಟೈಮ್ಸ್ ಬಳ್ಳಾರಿ**

ಭಾರತ ಚುನಾವಣಾ ಆಯೋಗವು ಅರ್ಹತಾ 2024ರ ಜ.01ರ ಸಂಬಂಧ ಮತದಾರರ ಪಟ್ಟಿಯ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ-2024 ರ ವೇಳಾಪಟ್ಟಿ ದಿನಾಂಕ ಹೊರಡಿಸಿದ್ದು, ತಿದ್ದುಪಡಿ, ವಿಳಾಸ ಬದಲಾವಣೆ, ವಿವಿಧ ನಮೂನೆಯ ಅರ್ಜಿ ಫಾರಂ ಸಲ್ಲಿಸಲು ಹಾಗೂ ಇನ್ನೂ ಹೆಚ್ಚು ಮತದಾರರ ನೋಂದಣಿಗೆ ವಿಶೇಷ ಅಭಿಯಾನ ಹಮ್ಮಿಕೊಳ್ಳಲಾಗುತ್ತಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಆಗಿರುವ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದ್ದಾರೆ.

ಈಗಾಗಲೇ, ಅ.27 ರಂದು ಕರಡು ಮತದಾರರ ಪಟ್ಟಿ ಪ್ರಕಟಿಸಿದೆ, ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಲು ಅ.27 ರಿಂದ ಡಿ.09 ರವರೆಗೆ ಅವಧಿ ನಿಗದಿಪಡಿಸಿದೆ ಮತ್ತು 2024 ರ ಜ.05 ರಂದು ಅಂತಿಮ ಮತದಾರರ ಪಟ್ಟಿ ಪ್ರಕಟಿಸಲಿದೆ.

ವಿಶೇಷ ಅಭಿಯಾನ:

ಹೆಸರು, ವಿಳಾಸ, ಭಾವಚಿತ್ರ ತಿದ್ದುಪಡಿ, ಮತದಾರರ ಪಟ್ಟಿಯಿಂದ ಹೆಸರು ತೆಗೆದುಹಾಕಲು ವಿಶೇಷ ಅಭಿಯಾನ ಹಮ್ಮಿಕೊಳ್ಳಲಾಗುತ್ತಿದೆ. ಈ ಸಂಬಂಧ ನವೆಂಬರ್ 18, 19 ಮತ್ತು ಡಿಸೆಂಬರ್ 02, 03 ರಂದು ವಿಶೇಷ ಅಭಿಯಾನ (Special Campaign) ಕಾರ್ಯವನ್ನು ಹಮ್ಮಿಕೊಂಡಿದ್ದು, ಮೇಲಿನ ವೇಳಾಪಟ್ಟಿಯಂತೆ ಹಾಗೂ ವಿಶೇಷ ಅಭಿಯಾನ (Special Campaign)ಕ್ಕೆ ನಿಗದಿಪಡಿಸಿದ ದಿನಾಂಕಗಳಂದು ಆಯಾ ಮತಗಟ್ಟೆಗಳಲ್ಲಿ (ಃಐಔ) ಮತಗಟ್ಟೆ ಮಟ್ಟದ ಅಧಿಕಾರಿಗಳು ಬೆಳಿಗ್ಗೆ 10 ರಿಂದ ಸಂಜೆ 05 ಗಂಟೆಯವರೆಗೆ ಹಾಜರಿರುತ್ತಾರೆ.

ಅರ್ಹತಾ ದಿನಾಂಕ 2024 ರ ಜ.01 ಕ್ಕೆ 18 ವರ್ಷ ಪೂರ್ಣಗೊಂಡ ಎಲ್ಲಾ ಅರ್ಹ ಮತದಾರರು ನಮೂನೆ-6 ಅರ್ಜಿಯನ್ನು ನಿಗದಿಪಡಿಸಿದ ದಿನಗಳಂದು ಸಂಬಂಧಪಟ್ಟ (BLO) ಮತಗಟ್ಟೆ ಮಟ್ಟದ ಅಧಿಕಾರಿಗಳಿಗೆ ಅಥವಾ ತಾಲ್ಲೂಕು ಕಚೇರಿಯಲ್ಲಿ ಸಲ್ಲಿಸಬಹುದು. ಹೆಸರು, ವಿಳಾಸ, ಭಾವಚಿತ್ರ ತಿದ್ದುಪಡಿಗಾಗಿ ನಮೂನೆ-8 ಅರ್ಜಿ ಹಾಗೂ ಮತದಾರರ ಪಟ್ಟಿಯಿಂದ ಹೆಸರು ತೆಗೆದುಹಾಕಲು (ಮರಣ ಹೊಂದಿದ ಮತದಾರರ ಮನೆಯ ಸಂಬಂಧಿಕರು) ನಮೂನೆ-7 ಅರ್ಜಿಯನ್ನು ಸಲ್ಲಿಸಬಹುದು ಎಂದು ಅವರು ತಿಳಿಸಿದ್ದಾರೆ.

ಅರ್ಹ ಮತದಾರರು ಹೆಚ್ಚಿನ ಆಸಕ್ತಿ ವಹಿಸಿ ತಮ್ಮ ಹೆಸರನ್ನು ಮತದಾರ ಪಟ್ಟಿಯಲ್ಲಿ ನೋಂದಾಯಿಸಿಕೊಂಡು, ಸುಭದ್ರ ಹಾಗೂ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಪಡಿಸುವಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ಮನವಿ ಮಾಡಿದ್ದಾರೆ.

## ಮಕ್ಕಳಿಗೆ ಅಗತ್ಯ ವೃತ್ತಿ ಕೌಶಲ್ಯ ದೊರಕಿಸಿ

### ಬಾಲ ನ್ಯಾಯ ಮಂಡಳಿಯ ಅಧ್ಯಕ್ಷರು, ನ್ಯಾಯಾಧೀಶರಾದ ರಮೇಶ ಎಸ್. ಗಾಣಿಗೇರ್ ಸಲಹೆ




**ಹಂಪಿ ಟೈಮ್ಸ್ ಕೊಪ್ಪಳ**

ಮಕ್ಕಳಿಗೆ ಅಗತ್ಯವಿರುವ ವೃತ್ತಿ ಕೌಶಲ್ಯ ಅಥವಾ ಸರಕಾರದ ಇತರೆ ಯೋಜನೆಗಳನ್ನು ದೊರಕಿಸಿ ಅವರು ಸಹ ಸ್ವತಂತ್ರವಾದ ಬದುಕನ್ನು ಕಟ್ಟಿಕೊಳ್ಳುವಲ್ಲಿ ಅಗತ್ಯ ನೆರವು ನೀಡುವುದು ಮಿಷನ್ ವಾತ್ಸಲ್ಯದ ಪ್ರಮುಖ ಕಾರ್ಯವಾಗಿದೆ. ಆದ್ದರಿಂದ ತಾವುಗಳು ಈ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿ ಯೋಜನೆಯನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸಿ ಎಂದು ಗಂಗಾವತಿ ಜೆ.ಎಂ.ಎಫ್.ಸಿ ಯ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಬಾಲ ನ್ಯಾಯ ಮಂಡಳಿಯ ಅಧ್ಯಕ್ಷರಾದ ರಮೇಶ ಎಸ್. ಗಾಣಿಗೇರ್ ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಯುನಿಸೆಫ್-ಮಕ್ಕಳ ರಕ್ಷಣಾ ಯೋಜನೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಕೊಪ್ಪಳರವರ ಸಂಯುಕ್ತಾಶ್ರಯದಲ್ಲಿ ಗುರುವಾರದಂದು ನಗರಾಭಿವೃದ್ಧಿ ಪ್ರಾಧಿಕಾರದ ಸಭಾಂಗಣದಲ್ಲಿ ಮಿಷನ್ ವಾತ್ಸಲ್ಯ ಯೋಜನೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ಎರಡು ದಿನಗಳ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಮಕ್ಕಳ ನ್ಯಾಯ(ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ-2015 ತಿದ್ದುಪಡಿ ಕಾಯ್ದೆ-2021ರ ಮುಖ್ಯ ಉದ್ದೇಶ ಕಾನೂನು ಸಂಘರ್ಷಕ್ಕೊಳಗಾದ ಹಾಗೂ ಪೋಷಣೆ ಮತ್ತು ರಕ್ಷಣೆ ಅವಶ್ಯವಿರುವ ಮಕ್ಕಳ ಪುನರ್ವಸತಿ ಹಾಗೂ ಸಮಾಜದಲ್ಲಿ ಪುನರ್ ಸ್ಥಾಪಿಸುವುದಾಗಿದೆ. ಈ ಪ್ರಕ್ರಿಯೆಯಲ್ಲಿ ಎಲ್ಲಾ ಅನುಷ್ಠಾನ ಸಂಸ್ಥೆಗಳು ಮಕ್ಕಳಸ್ನೇಹಿಯಾಗಿ, ಮಕ್ಕಳ ಹಿತದೃಷ್ಠಿಯಿಂದ ನಿರ್ಣಯ ಕೈಗೊಳ್ಳಬೇಕು. ಬಾಲ ನ್ಯಾಯ ಮಂಡಳಿಯಿಂದ ಪುನಃ ಸಾಮಾಜದ ಮುಖ್ಯವಾಹಿನಿಯಲ್ಲಿ ಸೇರ್ಪಡೆಯಾದ ಮಕ್ಕಳನ್ನು ಅನುಪಾಲನೆ ಮಾಡುವುದು ಅತ್ಯವಶ್ಯಕವಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರಾಧ ತಿಪ್ಪಣ್ಣ ಸಿರಸಗಿ ಅವರು ಮಾತನಾಡಿ, ಮಿಷನ್ ವಾತ್ಸಲ್ಯ ಯೋಜನೆಯು ಅಸಾಂಸ್ಥಿಕ ಸೇವೆಗಳಿಗೆ ಹೆಚ್ಚಿನ ಆದ್ಯತೆಯನ್ನು ನೀಡಿದೆ. ಅಸಾಂಸ್ಥಿಕ ಸೇವೆಗಳಲ್ಲಿ ದತ್ತು ಕಾರ್ಯಕ್ರಮ, ಪೋಷಕತ್ವ, ಪ್ರಾಯೋಜಕತ್ವ ಯೋಜನೆಗಳು ಪ್ರಮುಖವಾಗಿವೆ. ಜಿಲ್ಲೆಯಲ್ಲಿ ಮಕ್ಕಳನ್ನು ಎಲ್ಲೆಂದರಲ್ಲಿ ಬಿಸಾಡಿ ಮಕ್ಕಳ ಜೀವಕ್ಕೆ ಕುತ್ತು ತರುವ ಪ್ರಸಂಗಗಳು ವರದಿಯಾಗಿವೆ. ಆದ್ದರಿಂದ ಮಮತೆಯ ತೊಟ್ಟಿಲು ಮತ್ತು ಮಿಷನ್ ವಾತ್ಸಲ್ಯ ಕುರಿತು ಸಮುದಾಯದಲ್ಲಿ ಹೆಚ್ಚಿನ ಜಾಗೃತಿಯನ್ನು ಮೂಡಿಸಿ, ತನ್ಮೂಲಕ ಮಕ್ಕಳಿಗೆ ಸುರಕ್ಷಿತ ವಾತಾವರಣ ನಿರ್ಮಿಸಲು ಸಹಕರಿಸಿ ಎಂದು ಕರೆ ನೀಡಿದರು.

ಯುನಿಸೆಫ್-ಮಕ್ಕಳ ರಕ್ಷಣಾ ಯೋಜನೆಯ ವಿಭಾಗೀಯ ಸಂಯೋಜಕರಾದ ರಾಘವೇಂದ್ರ ಭಟ್ ಅವರು ಮಕ್ಕಳ ನ್ಯಾಯ(ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ-2015 ತಿದ್ದುಪಡಿ ಕಾಯ್ದೆ-2021ರ ಕುರಿತು ಹಾಗೂ ಯುನಿಸೆಫ್-ಮಕ್ಕಳ ರಕ್ಷಣಾ ಯೋಜನೆಯ ವ್ಯವಸ್ಥಾಪಕರಾದ ಹರೀಶ ಜೋಗಿ ಅವರು ಮಿಷನ್ ವಾತ್ಸಲ್ಯ ಯೋಜನೆ ಕುರಿತು ತರಬೇತಿಯನ್ನು ನೀಡಿದರು. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ರೋಹಿಣಿ ಕೊಟಗಾರ, ರವಿಕುಮಾರ ಪವಾರ, ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷರಾದ ನಿಲೋಫರ್ ಎಸ್. ರಾಂಪುರಿ, ಬಾಲಕರ ಮತ್ತು ಬಾಲಕಿಯರ ಬಾಲಮಂದಿರದ ಅಧೀಕ್ಷಕರು, ಆಪ್ತ ಸಮಾಲೋಚಕರು, ಗೃಹ ಮಾತೆಯರು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಕ್ಕಳ ಸಹಾಯವಾಣಿ ಹಾಗೂ ಮಕ್ಕಳ ಪಾಲನಾ ಕೇಂದ್ರಗಳ ಸಿಬ್ಬಂದಿ ಭಾಗವಹಿಸಿದ್ದರು.

## ಪುರಾಣ ಕೇಳಿದರೆ ಸಂಸ್ಕಾರ ಹೆಚ್ಚಳ

### ಮಲ್ಲಿಕಾರ್ಜುನ ಶಿವಾಚಾರ್ಯ ಶ್ರೀಗಳ ಹೇಳಿಕೆ



**ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ:**

ಬೆಳೆಯುತ್ತದೆ, ಜನರಲ್ಲಿ ಸಂಸ್ಕಾರ, ಸಂಸ್ಕೃತಿ, ಜ್ಞಾನ ವೃದ್ಧಿಯಾಗುತ್ತದೆ ಎಂದು ಪಟ್ಟಣದ ಅರಳಿಹಳ್ಳಿ ಗುರುಪಾದೇವರ ಮಠದ ಮಲ್ಲಿಕಾರ್ಜುನ ಶಿವಾಚಾರ್ಯಗಳು ಹೇಳಿದರು. ಅವರು ಸಮೀಪದ ಡಣಾಪುರ ಗ್ರಾಮದಲ್ಲಿ23 ನೇ ವಷ9ದ ಶ್ರೀ ಕಲುಬುರಗಿ ಶ್ರೀ ಶರಣಬಸವೇಶ್ವರ ಪುರಾಣ ಪ್ರಾರಂಭೋತ್ಸವಕ್ಕೆ ಚಾಲನೆ ನೀಡಿ,ಆಶೀರ್ವಚನ ನೀಡಿದರು.ಈಗ ರಾಜ್ಯದಲ್ಲೆಡೆ ಬರಗಾಲ ಆವರಿಸಿದೆ, ಇಂತಹ ಕಠಿಣ ಸಮಯದಲ್ಲೂ ಗ್ರಾಮಸ್ಥರು ಸಾಮೂಹಿವಿವಾಹ, ಪುರಾಣ ಕಾರ್ಯಕ್ರಮ ಹಮ್ಮಿಕೊಂಡಿರುವುದು ಮೆಚ್ಚುವಂತದ್ದು ಎಂದರು.

ಗರಗನಾಗಲಾಪುರದ ಶ್ರೀಗುರು ಒಪ್ಪತ್ತೇಶ್ವರಮಠದ ನಿಯೋಜಿತ ಪೀಠಾಧಿಪತಿ ನಿರಂಜನಪ್ರಭುದೇವರು ಮಾತನಾಡಿ, ಮನುಷ್ಯ ಯಾವಾಗಲೂ ಪುರಾಣ, ಪುಣ್ಯ ಕಥೆಗಳನ್ನು ಕೇಳುತ್ತಿರಬೇಕು.ಇದರಿಂದ ಆಧ್ಯಾತ್ಮದ ಅನುಭವವಾಗುತ್ತದೆ.ಗ್ರಾಮೀಣ ಪ್ರದೇಶದಲ್ಲಿ ಇನ್ನೂ ನೀರೀಕ್ಷಿತ ಪ್ರಮಾಣದಲ್ಲಿ ಶೈಕ್ಷಣಿಕ ಪ್ರಗತಿ ಆಗದೆ ಇರುವುದು ನೋವಿನ ಸಂಗತಿ. ಶಿಕ್ಷಣದಿಂದ ಮಾತ್ರ ಗ್ರಾಮ ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ. ಆದ್ದರಿಂದ ಪಾಲಕರು ಕಡ್ಡಾಯವಾಗಿ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವುದರ ಮೂಲಕ ಅವರನ್ನು ಸಾಕ್ಷರರನ್ನಾಗಿ ಮಾಡಬೇಕಾದ ಅಗತ್ಯತೆ ಇದೆ ಎಂದರು.ಈ ಸಂಧರ್ಭದಲ್ಲಿ ಡಣಾಪುರ ಗ್ರಾಪಂ ಅಧ್ಯಕ್ಷ ಹೆಚ್. ಮಲ್ಲೇಶ, ಡಣಾಪುರ ಮಠದವಡಿ. ಎಮ್. ಕೊಟ್ರಯ್ಯಸ್ವಾಮಿ, ಸಮಾಜಸೇವಕ ಕುರಿಶಿವಮೂರ್ತಿ, ಗ್ರಾಮ ಪಂಚಾಯಿತಿ ಸದಸ್ಯರಾದ ಕೆ.ಎಮ್ ಮಂಜಯ್ಯ ಸ್ವಾಮಿ, ಬಿ.ಬಸವರಾಜ, ಎನ್ ದಾಸಪ್ಪ ,ಮಂಜುನಾಥ, ಶರಣಯ್ಯ ಸ್ವಾಮಿ, ಹನುಮಂತಪ್ಪ, ಯಮನೂರ, ಹನುಮನಹಳ್ಳಿ ನಾಗರಾಜ, ಮಂಜುನಾಥ, ಎಸ್.ಎಸ್ ವಿರೂಪಾಕ್ಷಯ್ಯ, ಕಡ್ಲಿ ದೊಡ್ಡಶಿವಪ್ಪ, ತಂಬಳಿ ಗಾಳೆಪ್ಪ , ಈಡಿಗರ ಸಣ್ಣಜಂಬಪ್ಪ, ಎಲ್. ಕೊಟ್ರಪ್ಪ , ಎನ್. ರಮೇಶ , ಹಳ್ಳಿ ನಿಂಗಪ್ಪ, ಕೆ.ಅಂಜೀನಪ್ಪ, ಬಿ ಷಣ್ಮುಖಪ್ಪ , ಪ್ರವಚನಕಾರರಾದ ಚೆನ್ನಯ್ಯ ಶಾಸ್ತ್ರಿ, ಗವಾಯಿಗಳಾದ ಕಲ್ಯಾಣ ಕುಮಾರ , ತಬಲಾ ವಾದಕ ಪೂರ್ವಾಚಾರಿ ಸೇರಿದಂತೆ ಇತರರಿದ್ದರು. ನಂತರ ಶರಣಬಸವೇಶ್ವರ ಪುರಾಣದ ನಿಮಿತ್ತದ ಅನ್ನಸಂತರ್ಪಣೆ ನಡೆಯಿತು.

## ಯಶಸ್ವಿನಿ ರಕ್ಷಣಾ ಯೋಜನೆಯಡಿ ನೋಂದಣಿಗೆ ಆಹ್ವಾನ




**ಹಂಪಿ ಟೈಮ್ಸ್ ಬಳ್ಳಾರಿ**

ಪ್ರಸ್ತಕ ಸಾಲಿನಲ್ಲಿ ರಾಜ್ಯ ಸರ್ಕಾರ ಮರು ಜಾರಿಗೊಳಿಸಿರುವ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯ ಲಾಭ ಪಡೆಯಲು ಸಹಕಾರ ಸಂಘಗಳು ಹೊಸ ಸದಸ್ಯರನ್ನು ನೋಂದಾಯಿಸಲು ಸಹಕಾರ ಸಂಘಗಳ ಉಪ ನಿಬಂಧಕರು ತಿಳಿಸಿದ್ದಾರೆ.

ಸಹಕಾರಿಗಳಿಗಾಗಿ ಯಶಸ್ವಿನಿ ರಕ್ಷಣಾ ಯೋಜನೆಯನ್ನು ಮರು ಜಾರಿಗೊಳಿಸಲಾಗಿದ್ದು, ಜಿಲ್ಲೆಯ ಸಹಕಾರಿಗಳು ಯಶಸ್ವಿನಿ ಯೋಜನೆಯ ಸದುಪಯೋಗಪಡಿಸಿಕೊಳ್ಳಲು

ಜಿಲ್ಲೆಯ ಸಹಕಾರ ಸಂಘಗಳ ಹೊಸ ಸದಸ್ಯರು ಡಿ.31ರೊಳಗಾಗಿನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ನಗರದ ರೈಲ್ವೇ ಸ್ಟೇಷನ್ ರಸ್ತೆಯ ಜನತಾ ಬಜಾರ್ ಕಟ್ಟಡದ ಸಹಕಾರ ಸಂಘಗಳ ಉಪ ನಿಬಂಧಕರ ಕಾರ್ಯಾಲಯ ಅಥವಾ ಕಚೇರಿಯ ದೂ.08392-272635 ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


/freshiesicecreams
Pure delight in every bite. Savour the freshness of real fruit!
freshies fruit icecreams
Visit us today!
#9, ISR Road, Beside KLS Hospital, Near Amedkar Circle, Hosapete
Mob: 7036030603
Locate us:


ಹೋಲ್ ಸೇಲ್ ಧರದಲ್ಲಿ ಲಭ್ಯ
ರೈತರಿಂದ ನೇರ ಮಾರಾಟ
ಸಾವಯವ ಪದ್ಧತಿಯಲ್ಲಿ ಬೆಳೆದ ತೆಂಗಿನಕಾಯಿ ಮತ್ತು ಬಾಳೆ ಹಣ್ಣು ಹೋಲ್ ಸೇಲ್ ಧರದಲ್ಲಿ ಸಿಗುತ್ತವೆ.
ORGANIC COCONUT & BANANA
Available at Wholesale Price
9845865204 ಹೊಸಪೇಟೆ

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA